ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

(ಜಿಲ್ಲಾ ನಗರಾಭಿವೃದ್ಧಿ ಕೋಶ)

ನಂ.ಪುರಸಭೆ (1) ಸಿಆರ್.155 (1) /2006-07 ದಿನಾಂಕ.4-11-2006.

## ಅ ಧಿ ಸೂ ಚ ನೆ

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11 ರನ್ವಯ ಚಿತ್ರದುರ್ಗ ನಗರಸಭೆಗೆ 2001 ರ ಜನಗಣತಿ ಆಧಾರದ ಮೇರೆಗೆ 35 ವಾರ್ಡ್‌ಗಳನ್ನು ಪುನರ್ ವಿಂಗಡಿಸಿ ಏಕ ಸದಸ್ಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅಧಿಸೂಚನೆ ಕ್ರಮಾಂಕ.ಪುರಸಭೆ(1) ಸಿಆರ್.155(1)/2006-07 ದಿನಾಂಕ. 4-10-2006 ರಂದು ಕರಡು ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆ ಭಾಗದ ಸಂಖ್ಯೆ VI ರಲ್ಲಿ ಪ್ರಕಟಿಸಿದ್ದು, ಆ ಮೂಲಕ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಂದ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ ಸದರಿ ರಾಜ್ಯ ಪತ್ರ ಅಧಿಸೂಚನೆಯನ್ನು ದಿನಾಂಕ.4-10-2006 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ

ಮತ್ತು ಸದರಿ ಕರಡು ಅಧಿಸೂಚನೆಯ ಬಗ್ಗೆ ಸ್ವೀಕರಿಸಲಾದ ಆಕ್ಷೇಪಣೆಗಳನ್ನು ಜಿಲ್ಲಾಧಿಕಾರಿಗಳು ಸ್ವೀಕರಿಸಿ ಪರಿಶೀಲಿಸಿರು ವುದರಿಂದ

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11 ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ.UDD 59 MLR 2006 ಬೆಂಗಳೂರು ದಿ.18-8-2006 ರ ಆದೇಶದಂತೆ ಪ್ರದತ್ತವಾದ ಅಧಿಕಾರ ಹೊಂದಿರುವುದರಿಂದ ಕೆ.ಅಮರನಾರಾಯಣ, ಭಾ.ಆ.ಸೇ, ಜಿಲ್ಲಾಧಿಕಾರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ಈ ಮೂಲಕ ಘೋಷಿಸುವುದೇನೆಂದರೆ ಚಿತ್ರದುರ್ಗ ನಗರಸಭೆಗೆ 2001ರ ಜನಗಣತಿ ಆಧಾರದ ಮೇಲೆ 35 ವಾರ್ಡ್‌ಗಳನ್ನು ವಿಂಗಡಿಸಿ ಏಕ ಸದಸ್ಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ಕೋಷ್ಟಕದ ಅಂಕಣ 2 ರಲ್ಲಿ ನಮೂದಿಸಿರುವ ವಾರ್ಡ್‌ಗಳಿಗೆ ಅಂಕಣ 3ರಲ್ಲಿ ವಾರ್ಡ್‌ನ ವ್ಯಾಪ್ತಿಯನ್ನು ನಿಗದಿಪಡಿಸಿ ಪ್ರಕಟಿಸಲಾಗಿದೆ.

## ಕೋ ಷ್ಟ ಕ

| ಕ್ರ ಸಂ. | ವಾರ್ಡಿನ ಹೆಸರು / ಸಂಖ್ಯೆ | ವಾರ್ಡಿನ ವ್ಯಾಪ್ತಿ |
|---|---|---|
| **1** | **2** | **3** |
| 1 | 1 | ಪೂರ್ವಕ್ಕೆ : ವಿಜಯಲಕ್ಷ್ಮಿ ಮೆಡಿಕಲ್ ಸ್ಟೋರ್ ನಿಂದ ದಕ್ಷಿಣಾಭಿಮುಖವಾಗಿ ಜೋಗಿಮಠಿ ರಸ್ತೆಯಲ್ಲಿ ಮುಂದುವರೆದು ಮಾಜಿ ಸದಸ್ಯರಾದ ಶ್ರೀ ಮಂಜುನಾಥ್‌ರವರ ಜಮೀನಿನಲ್ಲಿ ಕೊನೆಗೊಳ್ಳುತ್ತದೆ.<br>ಪಶ್ಚಿಮಕ್ಕೆ : ವಿವೇಕಾನಂದನಗರದಲ್ಲಿರುವ ಕೊಳಚೆ ನಿರ್ಮೂಲನಾ ಮಂಡಳಿಯ ಶೌಚಾಲಯದಿಂದ ಅಗಳು ಪ್ರದೇಶದಲ್ಲಿ ಮುಂದುವರೆದು ಪೂರ್ವಕ್ಕೆ ತಿರುಗಿ ಹೋಟೆಲ್ ಶಿವರಾಂ ರವರ ತೆಂಗಿನ ತೋಟದಲ್ಲಿ ಮುಂದುವರೆದು ಉತ್ತರಕ್ಕೆ ತಿರುಗಿ ಶೃಂಗೇರಿ ಮಠದ ಸರ್ಕಲ್‌ಗೆ ನಿಂತು, ಉತ್ತರಾಭೀಮುಖವಾಗಿ ಸಾಗಿ ಪೂರ್ವೋತ್ತರ ದಿಕ್ಕಿನಲ್ಲಿ ಸಾಗಿ ಪೂರ್ವಕ್ಕೆ ತಿರುಗಿ ಲಾಟರಿ ಶೌಕತಲ್ಲಿ ಮನೆ ಪಕ್ಕದ ಗಲ್ಲಿ ಮುಖೇನ ಉತ್ತರಾಭೀಮುಖವಾಗಿ ಸಾಗಿ ವಿಜಯಲಕ್ಷ್ಮಿ ಮೆಡಿಕಲ್ಸ್ ಹಿಂಭಾಗದ ಗಲ್ಲಿಗೆ ಕೊನೆಗೊಳ್ಳುತ್ತದೆ.<br>ಉತ್ತರಕ್ಕೆ : ವಿಜಯಲಕ್ಷ್ಮಿ ಮೆಡಿಕಲ್ಸ್ ಹಿಂಭಾಗದ ಗಲ್ಲಿಯಿಂದ ಪೂರ್ವಕ್ಕೆ ಮುಂದುವರೆದು ವಿಜಯಲಕ್ಷ್ಮಿ ಮೆಡಿಕಲ್ಸ್‌ಗೆ ಕೊನೆಗೊಳ್ಳುತ್ತದೆ.<br>ದಕ್ಷಿಣಕ್ಕೆ : ಜೋಗಿಮಠಿ ರಸ್ತೆಯ ಪಕ್ಕದಲ್ಲಿರುವ ಮಾಜಿ ಸದಸ್ಯರಾದ ಶ್ರೀ ಮಂಜುನಾಥ್‌ರವರ ಜಮೀನಿನಿಂದ ಪಶ್ಚಿಮಾಭಿಮುಖವಾಗಿ ಸಾಗಿ ಕೊಳಚೆ ನಿರ್ಮೂಲನಾ ಮಂಡಳಿಯ ಶೌಚಾಲಯದವರೆಗೆ |

| 1 | 2 | 3 |
|---|---|---|
| 2 | 2 | ಪೂರ್ವಕ್ಕೆ : ಸಣ್ಣಗರಡಿ ರಸ್ತೆಯಲ್ಲಿ ಬರುವ ಬುಡ್ಡಮ್ಮ ದೇವಸ್ಥಾನದಿಂದ ದಕ್ಷಿಣಾಭಿಮುಖವಾಗಿ ಸಾಗಿ ಶೃಂಗೇರಿ ಮಠದ ಪಕ್ಕದಲ್ಲಿರುವ ರಸ್ತೆಯಿಂದ ದಕ್ಷಿಣಾಭಿಮುಖವಾಗಿ ಸಾಗಿ ಶಿವರಾಂ ತೋಟದ ಪಕ್ಕದ ರಸ್ತೆಯಿಂದ ಸಿ.ಟಿ.ತಿಪ್ಪೇಸ್ವಾಮಿಯ ಲೇಔಟ್‌ನಲ್ಲಿರುವ ನೀರಿನ ತೊಟ್ಟಿಯವರೆಗೆ ಬಂದು ನಿಲ್ಲುತ್ತದೆ.<br>ಪಶ್ಚಿಮಕ್ಕೆ : ಕಾಳಿಕಾಂಬ ದೇವಸ್ಥಾನದ ಮುಂಭಾಗದಿಂದ ಉತ್ತರಾಭಿಮುಖವಾಗಿ ಸಾಗಿ ನೇರವಾಗಿ ಬಂದು ಮಸೀದಿ ಮುಂಭಾಗದ ಫಿಲ್ಟರ್‌ಹೌಸ್ ರಸ್ತೆಗೆ ಸೇರುತ್ತದೆ.<br>ಉತ್ತರಕ್ಕೆ : ಮಸೀದಿ ಮುಂಭಾಗದ ಫಿಲ್ಟರ್‌ಹೌಸ್ ರಸ್ತೆಯ ಮೂಲೆಯಿಂದ ಪೂರ್ವಾಭಿಮುಖವಾಗಿ ಸಾಗಿ ಬಲಭಾಗದ ಮನೆಗಳನ್ನೊಳಗೊಂಡು ಕರುವಿನಕಟ್ಟೆ ಸರ್ಕಲ್ ವೃತ್ತದಿಂದ ಮುಂದೆ ಸಾಗಿ ಬುಡ್ಡಮ್ಮನ ದೇವಸ್ಥಾನದ ಮೂಲೆಗೆ ನಿಲ್ಲುತ್ತದೆ.<br>ದಕ್ಷಿಣಕ್ಕೆ : ಸಿ.ಟಿ.ತಿಪ್ಪೇಸ್ವಾಮಿಯವರ ಲೇಔಟ್ ಪೂರ್ವ ಭಾಗದಲ್ಲಿರುವ ನೀರಿನ ತೊಟ್ಟಿಯಿಂದ ಪಶ್ಚಿಮಾಭಿಮುಖವಾಗಿ ಹೊರಟು ಸ್ಮಶಾನದ ರಸ್ತೆಯಿಂದ ಕಾಮನಬಾವಿ ರಸ್ತೆ ಮುಖಾಂತರ ಸಾಗಿ ಕಾಮನಬಾವಿ ಬಡಾವಣೆಯಲ್ಲಿ ಬರುವ ಕಾಳಮ್ಮನ ದೇವಸ್ಥಾನದ ಮುಂಭಾಗದ ಮೂಲೆಯವರೆಗೆ ಬಂದು ನಿಲ್ಲುತ್ತದೆ. |
| 3 | 3 | ಪೂರ್ವಕ್ಕೆ : ಮಹಾರಾಣಿ ಕಾಲೇಜ್ ಹಿಂಭಾಗಕ್ಕಿರುವ ಕಾಳಮ್ಮ ದೇವಸ್ಥಾನದ ಮುಂಭಾಗದಲ್ಲಿರುವ ಮೂಲೆ ಮನೆಯಿಂದ ಕಾಮನಬಾವಿ 4ನೇ ಕ್ರಾಸ್ ಮುಖಾಂತರ ಉತ್ತರಾಭಿಮುಖವಾಗಿ ಸಾಗಿ ಚಂದ್ರಕಲಾ ಸ್ಟೋರ್‌ಗೆ ಕೊನೆಗೊಳ್ಳುತ್ತದೆ. ಮತ್ತು ಕರುವಿನ ಕಟ್ಟೆ ಸರ್ಕಲ್‌ನಲ್ಲಿರುವ ದೇವೇಂದ್ರಪ್ಪನ ಬಿಲ್ಡಿಂಗ್ ಮೂಲೆಯಿಂದ ತಿಪ್ಪನಘಟ್ಟಮ್ಮ ದೇವಸ್ಥಾನದ ಮೂಲೆಯವರೆಗೆ.<br>ಪಶ್ಚಿಮಕ್ಕೆ : ಮಹಾರಾಣಿ ಕಾಲೇಜ್ ಹತ್ತಿರವಿರುವ ಪ್ರಿನ್ಸಿಪಲ್ ಬೋರಯ್ಯ ಮನೆಯಿಂದ ಕೋಟೆ ರಸ್ತೆಯ ಮೂಲಕ ಉತ್ತರಾಭಿಮುಖವಾಗಿ ನಗರಸಭೆ ಫಿಲ್ಟರ್ ಹೌಸ್‌ಗೆ ಕೊನೆಗೊಳ್ಳುತ್ತದೆ. ಮತ್ತು ಕೋಟೆ ಶಾಲೆ ಹಿಂಭಾಗದ ರಸ್ತೆಯಲ್ಲಿರುವ ಈಶ್ವರಪ್ಪನ ಮನೆಯಿಂದ ಗಫೂರ್ ಸಾಬ್ ಮನೆಯವರೆಗೆ.<br>ಉತ್ತರಕ್ಕೆ : ನಗರಸಭೆಯ ಫಿಲ್ಟರ್ ಹೌಸ್ ಕಟ್ಟಡದಿಂದ ಪೂರ್ವಾಭಿಮುಖವಾಗಿ ಸಾಗಿ ಕೋಟೆ ಸ್ಕೂಲ್ ಹಿಂಭಾಗದ ರಸ್ತೆಯ ಎಡಕ್ಕೆ ತಿರುಗಿ ಈಶ್ವರಪ್ಪನ ಮನೆಯಿಂದ ಗಫೂರ್ ಸಾಬ್ ಮನೆ ಮೂಲಕ ಪೂವಾಭಿಮುಖವಾಗಿ ಕಂಬಳಿ ಬೀದಿ ಮೂಲಕ ಚರ್ಚ್ ಮುಂಭಾಗದಿಂದ ಸಾಗಿ ತಿಪ್ಪನಘಟ್ಟಮ್ಮ ದೇವಸ್ಥಾನದವರೆಗೆ. (ಬಲಭಾಗದ ಮನೆಗಳು)<br>ದಕ್ಷಿಣಕ್ಕೆ : ಮಹಾರಾಣಿ ಕಾಲೇಜ್ ದಕ್ಷಿಣಕ್ಕೆ ಇರುವ ಹಾಸ್ಟೇಲ್ ಹಿಂಭಾಗದ ಗುಡ್ಡದ ಪಕಕ್ಕೆ ಇರುವ ಅಗಳುನಿಂದ ಪೂರ್ವಾಭಿಮುಖವಾಗಿ ಸಾಗಿ ಕಾಮನಬಾವಿ 4ನೇ ಕ್ರಾಸ್ ಮೂಲೆಗಿರುವ ರೂಪ ಇವರ ಮನೆವರೆಗೆ ಮತ್ತು ಮುಂದುವರೆದು ಕರುವಿನಕಟ್ಟೆ ಸರ್ಕಲ್ ದೇವೇಂದ್ರಪ್ಪ ಇವರ ಮನೆಯಿಂದ ಪಶ್ಚಿಮಾಭಿಮುಖವಾಗಿ ಫಿಲ್ಟರ್ ಹೌಸ್ ಮಸೀದಿ ಕಾಂಪ್ಲೆಕ್ಸ್ ವರೆಗೆ |
| 4 | 4 | ಪೂರ್ವಕ್ಕೆ : ರಂಗಯ್ಯನ ಬಾಗಿಲು ಬಳಿ ಯಾದವ ಹಾಸ್ಟೇಲ್ ಮುಂಭಾಗದಲ್ಲಿರುವ ಮನೋರಂಜನ್ ಅಪ್ಟಿಕಲ್ಸ್ ಕಟ್ಟಡದ ಪಕ್ಕದಲ್ಲಿರುವ ಕನ್ಸರ್ ವೆನ್ಸಿಯಿಂದ ದಕ್ಷಿಣಾಭಿಮುಖವಾಗಿ ಸಾಗಿ ಲಾಟರಿ ಮಾರಾಟಗಾರರಾದ ಶೌಕತ್ತಾಲಿ ಮನೆಯವರೆಗೆ.<br>ಪಶ್ಚಿಮಕ್ಕೆ : ಗುಡ್ಡದ ಹಾಗೂ ಬೆಟ್ಟದ ಪ್ರದೇಶ<br>ಉತ್ತರಕ್ಕೆ : ಮನೋರಂಜನ್ ಅಪ್ಟಿಕಲ್ಸ್‌ನಿಂದ ಪಶ್ಚಿಮಾಭಿಮುಖವಾಗಿ ಸಾಗಿ ರಂಗಯ್ಯನ ಬಾಗಿಲು ಮೂಲಕ ನೇರವಾಗಿ ಉಚ್ಚಂಗಿ ಎಲ್ಲಮ್ಮ ದೇವಸ್ಥಾನದ ಎಡಭಾಗದ ಗಲ್ಲಿಯಿಂದ ಸಾಗಿ ಗುಡ್ಡಕ್ಕೆ ಕೊನೆಗೊಳ್ಳುತ್ತದೆ.<br>ದಕ್ಷಿಣಕ್ಕೆ : ಕೋಟೆ ರಸ್ತೆಯಲ್ಲಿ ಮಡಿವಾಳರ ಮಲ್ಲಪ್ಪನ ಮನೆಯಿಂದ ಉತ್ತರಾಭಿಮುಖವಾಗಿ ಸಾಗಿ ಫಿಲ್ಟರ್ ಹೌಸ್ ಮುಂಭಾಗಕ್ಕಿರುವ ಶಾಲೆ ಕಾಂಪೌಂಡ್ ಮತ್ತು ಶಾಲೆ ಹಿಂಭಾಗದಲ್ಲಿರುವ ಕಂಬಳಿ ಬೀದಿ ರಸ್ತೆಯಲ್ಲಿರುವ ಖಾಸಗಿ ಶಾಲೆ ಮೂಲೆಯಿಂದ ಪೂವಾಭಿಮುಖವಾಗಿ ಸಾಗಿ ಚರ್ಚ್‌ಮೂಲಕ ಮೊಚಿದೇವಸ್ಥಾನದ ಪಕ್ಕದಿಂದ ಸಾಗಿ ದೊಡ್ಡಗರಡಿ ರಸ್ತೆ ಮೂಲಕ ಹಾಗೂ ಕರುವಿನಕಟ್ಟೆ ಸರ್ಕಲ್ ಮೂಲಕ ಈ ಎಡಭಾಗದ ಎಲ್ಲಾ ಮನೆಗಳು ಒಳಗೊಂಡು ಲಾಠರಿ ಮಾರಾಟಗಾರರಾದ ಶೌಕತ್ತಾಲಿ ಮನೆಯವರೆಗೆ. |
| 5 | 5 | ಪೂರ್ವಕ್ಕೆ : ರಂಗಯ್ಯನಬಾಗಿಲು ಮುಂಭಾಗದ ಮೂಲೆಯಲ್ಲಿರುವ ಸಿ.ಎನ್.ಕಲ್ಲಪ್ಪರವರ ಮನೆಯಿಂದ ಉತ್ತರಾಭಿಮುಖವಾಗಿ ಸಾಗಿ ಖಾಜಿ ಮೊಹಲ್ಲಾ ರಸ್ತೆ ತಾರಾ ರೋಜಸ್ ಶಾಲೆ ಮುಂಭಾಗದಿಂದ ಸಾಗಿ ಪೂಜಾರಿ ಬುಡ್ಡಪ್ಪರವರ ಮನೆವರೆಗೆ.<br>ಪಶ್ಚಿಮಕ್ಕೆ : ಆನೆ ಬಾಗಿಲುನಿಂದ ದಕ್ಷಿಣಾಭಿಮುಖವಾಗಿ ಎಡಭಾಗಕ್ಕೆ ಇರುವ ಶ್ಯಾಮ್‌ರವರ ಕಟ್ಟಡದಿಂದ ಚಿಕ್ಕಪೇಟೆ ರಸ್ತೆ ಮೂಲಕ ದಕ್ಷಿಣಾಭಿಮುಖವಾಗಿ ಸಾಗಿ ಉಚ್ಚಂಗಿಯಲ್ಲಮ್ಮ ದೇವಾಸ್ಥಾನದ ಮುಂಭಾಗಕ್ಕಿರುವ ಎಲ್.ಟಿ. ನಾಗರಾಜ್‌ರವರ ಕಟ್ಟಡದವರೆಗೆ.<br>ಉತ್ತರಕ್ಕೆ : ಆನೆಬಾಗಿಲು ಮುಂಭಾಗ ಪೂರ್ವಾಭಿಮುಖವಾಗಿ ನಿಂತು ಬಲಭಾಗದಲ್ಲಿರುವ ಶ್ಯಾಂರವರ ಕಾಂಪ್ಲೆಕ್ಸ್ ನಿಂದ ಪೂರ್ವಾಭಿಮುಖವಾಗಿ ಸಾಗಿ ಐಯ್ಯಂಗಾರ್ ರವರ ಹಿಟ್ಟಿನಗಿರಣಿ ಮುಂಭಾಗದಿಂದ ಧರ್ಮಶಾಲಾ ರಸ್ತೆ ದಾಟಿಕೊಂಡು ಇ.ಪಿ.ಬ್ರದರ್ಸ್ ಮೂಲೆಯಲ್ಲಿ ಬಲಕ್ಕೆ ತಿರುಗಿ ಪುನ: ಎಡಕ್ಕೆ ತಿರುಗಿ ಹಳೆ ಮಾದ್ಯಮಿಕ ಶಾಲೆ ರಸ್ತೆಯಿಂದ ಪೂಜಾರಿ ಬುಡ್ಡಪ್ಪನವರ ಮನೆಯವರೆಗೆ.<br>ದಕ್ಷಿಣಕ್ಕೆ : ರಂಗಯ್ಯನ ಬಾಗಿಲು ಬಳಿ ಇರುವ ಸಿ.ಎನ್.ಕಲ್ಲಪ್ಪರವರ ಮನೆಯಿಂದ ಪಶ್ಚಿಮಾಭಿಮುಖವಾಗಿ ದೊಡ್ಡಪೇಟೆ ರಸ್ತೆ ಮುಲಕ ಉಚ್ಚಂಗಿ ಯಲ್ಲಮ್ಮ ದೇವಸ್ಥಾನದ ಮುಂಭಾಗಕ್ಕಿರುವ ಎಲ್.ಟಿ. ನಾಗರಾಜ್ ರವರ ಕಟ್ಟಡದವರೆಗೆ. |
| 6 | 6 | ಪೂರ್ವಕ್ಕೆ : ನಗರಸಭೆ ಕಾರ್ಯಾಲಯದಿಂದ ಉತ್ತರಾಭಿಮುಖವಾಗಿ ಸಾಗಿ ಪ್ರವಾಸಿ ಮಂದಿರ ಸುತ್ತುಕೊಂಡು ಗಾಯಿತ್ರಿ ಕಲ್ಯಾಣ ಮಂಟಪ ಕಾಂಪ್ಲೆಕ್ಸ್‌ವರೆಗೆ<br>ಪಶ್ಚಿಮಕ್ಕೆ : ಸಂತೆ ಬಾಗಿಲಿನಿಂದ ಉತ್ತರಾಭಿಮುಖವಾಗಿ ಗಾಂಧಿ ಸರ್ಕಲ್ ಮೂಲಕ ಸಾಗಿ ಜಟಕಾ ಸ್ಟ್ಯಾಂಡ್ ಮುಂಭಾಗ ಇರುವ ನಂಜುಂಡಶೆಟ್ಟಿ ಬಿಲ್ಡಿಂಗ್‌ವರೆಗೆ<br>ಉತ್ತರಕ್ಕೆ : ಗಾಯಿತ್ರಿ ಕಲ್ಯಾಣ ಮಂಟಪ ಕಾಂಪ್ಲೆಕ್ಸ್‌ನಿಂದ ಪಶ್ಚಿಮಾಭಿಮುಖವಾಗಿ ಬಸವೇಶ್ವರ ಚಿತ್ರಮಂದಿರ ರಸ್ತೆ ಮೂಲಕ ಸಾಗಿ ಜಟಕಾ ಸ್ಟ್ಯಾಂಡ್ ಮುಂಭಾಗ ನಂಜುಂಡಶೆಟ್ಟಿ ಬಿಲ್ಡಿಂಗ್‌ವರೆಗೆ<br>ದಕ್ಷಿಣಕ್ಕೆ : ನಗರಸಭೆ ಕಾರ್ಯಾಲಯದಿಂದ ಐ.ಎಮ್.ಎ. ಬಿಲ್ಡಿಂಗ್ ಮುಖೇನ ರಂಗಯ್ಯನ ಬಾಗಿಲಿನಿಂದ ಖಾಜಿ ಮೊಹಲ್ಲಾ ರಸ್ತೆ ಮೂಲಕ ಪಾರ್ಶ್ವನಾಥ ವಿದ್ಯಾಸಂಸ್ಥೆ ಮುಂಭಾಗದಿಂದ ಅಯ್ಯಂಗಾರ ರಸ್ತೆಯಿಂದ ಆನೆ ಬಾಗಿಲುವರೆಗೆ |

| 1 | 2 | 3 |
|---|---|---|
| 7 | 7 | ಪೂರ್ವಕ್ಕೆ : ಉಚ್ಚಂಗಿ ಎಲ್ಲಮ್ಮನ ದೇವಸ್ಥಾನದಿಂದ ಆನೆಬಾಗಿಲ ಕಡೆ ಹೋಗುವ ಚಿಕ್ಕಪೇಟೆ ಮುಖ್ಯ ರಸ್ತೆ, ಆನೆಬಾಗಿಲು ಮುಂಭಾಗದಲ್ಲಿರುವ ಶ್ರೀನಿವಾಸ ಶೆಟ್ಟಿಯವರ ಮನೆವರೆಗೆ.<br>ಪಶ್ಚಿಮಕ್ಕೆ : ಬುರುಜನಹಟ್ಟಿ ಸರ್ಕಲ್‌ನಿಂದ ದಕ್ಷಿಣಾಭಿಮುಖವಾಗಿ ಸಾಗಿ ಉಪ್ಪುನೀರು ಬಾವಿ ರಸ್ತೆಯಲ್ಲಿರುವ ಪಂಡಿತ್ ಅನಸೂಯಮ್ಮ ಮನೆಯವರೆಗೆ.<br>ಉತ್ತರಕ್ಕೆ : ಆನೆಬಾಗಿಲ ಮುಂಬಾಗದ ಶ್ರೀನಿವಾಸ ಶೆಟ್ಟಿಯವರ ಮನೆಯಿಂದ ಬುರುಜನಹಟ್ಟಿ ಸರ್ಕಲ್‌ವರೆಗಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದವರೆಗೆ.<br>ದಕ್ಷಿಣಕ್ಕೆ : ಉಚ್ಚಂಗಿ ಎಲ್ಲಮ್ಮನ ದೇವಸ್ಥಾನದ ಹಿಂಬಾಗದಲ್ಲಿರುವ ಗುಡ್ಡದ ಪ್ರದೇಶ ಎಸ್.ಬಿ.ಬಸ್ ಮಾಲಿಕರ ಮನೆಯ ಹಿಂಬಾಗದ ಗುಡ್ಡದ ಪ್ರದೇಶದೊಂದಿಗೆ ಪಂಡಿತ್ ಅನಸೂಯಮ್ಮ ಮನೆವರೆಗೆ ಕೊನೆಗೊಳ್ಳುತ್ತದೆ. |
| 8 | 8 | ಪೂರ್ವಕ್ಕೆ : ಬುರುಜನಹಟ್ಟಿ ಸರ್ಕಲ್‌ನಿಂದ ದಕ್ಷಿಣಾಭಿಮುಖವಾಗಿ ಸಿದ್ದರಾಮೇಶ್ವರ ಸರ್ಕಲ್‌ಗೆ ಹೋಗುವ ರಸ್ತೆ ಎಡಬಾಗದಲ್ಲಿ ಮಾಜಿ ನಗರಸಭೆ ಅಧ್ಯಕ್ಷ ಹೆಚ್. ಮಂಜಪ್ಪ ರವರ ಮಳಿಗೆ ಪಕ್ಕದಲ್ಲಿ ಹೋಗುವ ಗಲ್ಲಿಯ ಪೂರ್ವಾಬಿಮುಖವಾಗಿ ಹೋಗಿ ಕೊನೆಗೊಳ್ಳುವ ಜಕಾತಿ ಸಿದ್ದಪ್ಪನ ಮನೆಯಿಂದ ದಕ್ಷಿಣಾಭಿಮುಖವಾಗಿ ಸಾಗಿ ರತ್ನಮ್ಮ ಕೋಂ ನಿಂಗಪ್ಪ ರವರ ಮನೆಗೆ ಕೊನೆಗೊಳ್ಳುವ ಸಿದ್ದಪ್ಪನ ಮನೆಯಿಂದ ರತ್ನಮ್ಮನ ಮನೆಯವರೆಗೆ ಬರುವ ಕೋಟೆ ಸರಹದ್ದು ಗೋಡೆ.<br>ಪಶ್ಚಿಮಕ್ಕೆ : ಸಿಹಿನೀರು ಹೊಂಡದ ಬಾಗಿಲಿನಿಂದ ದಕ್ಷಿಣಾಭಿಮುಖವಾಗಿ ಬಲಭಾಗಕ್ಕೆ ಬರುವ ಗುಡ್ಡದ ಪ್ರದೇಶ.<br>ಉತ್ತರಕ್ಕೆ : ಸಿಹಿನೀರು ಹೊಂಡದ ಮುಂಭಾಗದ ಬಲಭಾಗಕ್ಕಿರುವ ಐಸ್ ಪ್ಯಾಕ್ಟರಿಯಿಂದ ಉರ್ದುಶಾಲೆ ಮುಖೇನ ಪೂರ್ವಾಭಿಮುಖವಾಗಿ ಸಾಗಿ ಶ್ರೀಕಂಠಪ್ಪನ ಮನೆಯವರೆಗೆ ಬಂದು ಬಲಕ್ಕೆ ತಿರುಗಿ ಗಣಾಚಾರಿ ಮನೆ ಮೂಲಕ ಪೂವಾಭಿಮುಖವಾಗಿ ಸಾಗಿ ತಗ್ಗಿನ ಆಂಜನೇಯ ದೇವಸ್ಥಾನದ ಮೂಲಕ ಎಡಕ್ಕೆ ತಿರುಗಿ ಉತ್ತರಾಭಿ ಮುಖವಾಗಿ ಸಾಗಿ ಮಾಜಿ ನಗರಸಭಾ ಅಧ್ಯಕ್ಷ ಹೆಚ್. ಮಂಜಪ್ಪರವರ ಮಳಿಗೆಯವರೆಗೆ ಬಂದು ಬಲಭಾಗಕ್ಕೆ ತಿರುಗಿ ಪೂರ್ವಾಭಿಮುಖವಾಗಿ ನಾಗಪ್ಪ ಮನೆಯವರೆಗೆ.<br>ದಕ್ಷಿಣಕ್ಕೆ : ಪೂರ್ವಕ್ಕಿರುವ ಕೋಟೆ ಸರಹದ್ದು ಗೋಡೆಯಿಂದ ಪಶ್ಚಿಮಾಭಿಮುಖವಾಗಿ ಸಾಗಿ ಎಡಭಾಗಕ್ಕೆ ಬರುವ ಗುಡ್ಡದ ಪ್ರದೇಶ. |
| 9 | 9 | ಪೂರ್ವಕ್ಕೆ : ಆನೆಬಾಗಿಲಿನಿಂದ ಉತ್ತರಾಭಿಮುಖವಾಗಿ ಸಾಗಿ ಗಾಂಧೀಸರ್ಕಲ್‌ನಲ್ಲಿರುವ ಷರಾಫ್ ಹುಚ್ಚರಾಯಶೆಟ್ಟಿ ಇವರ ಕಟ್ಟಡಕ್ಕೆ ಕೊನೆಗೊಳ್ಳುತ್ತದೆ.<br>ಪಶ್ಚಿಮಕ್ಕೆ : ಹೊಳಲ್ಕೆರೆ ರಸ್ತೆಯಲ್ಲಿರುವ ಕೋಟೆ ಪೊಲೀಸ್ ಸ್ಟೇಷನ್ ಪಕ್ಕದ ಮೂಲೆ ಮನೆಯಿಂದ ದಕ್ಷಿಣಾಭಿಮುಖವಾಗಿ ಸಾಗಿ ಸಿಹಿನೀರಿನ ಹೊಂಡದ ರಸ್ತೆಯ ಮೂಲಕ ಕೋಟೆ ಬಾಗಿಲ ಮುಂಭಾಗಕ್ಕಿರುವ ನಾಲ್‌ಬಂಧ್ ಇಬ್ರಾಹಿಂ ಸಾಬ್ ರವರ ಮನೆಯವರೆಗೆ<br>ಉತ್ತರಕ್ಕೆ : ಗಾಂಧೀಸರ್ಕಲ್‌ನಲ್ಲಿರುವ ಷರಾಫ್ ಹುಚ್ಚರಾಯಶೆಟ್ಟಿ ಅಂಗಡಿಯಿಂದ ಪಶ್ಚಿಮಾಭಿಮುಖವಾಗಿ ಹೊಳಲ್ಕೆರೆ ರಸ್ತೆಯ ಮೂಲಕ ನೇರವಾಗಿ ಸಾಗಿ ಕೋಟೆ ಪೊಲೀಸ್ ಸ್ಟೇಷನ್ ಪಕ್ಕದ ಮನೆಗೆ ಕೊನೆಗೊಳ್ಳುತ್ತದೆ.<br>ದಕ್ಷಿಣಕ್ಕೆ : ಆನೆಬಾಗಿಲಿನಿಂದ ಪಶ್ಚಿಮಾಭಿಮುಖವಾಗಿ ಬುರುಜನಹಟ್ಟಿ ಸರ್ಕಲ್‌ವರೆಗೆ ಸಾಗಿ ನಂತರ ಎಡಭಾಗಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಸಿದ್ದರಾಮೇಶ್ವರ ಸರ್ಕಲ್ ರಸ್ತೆಗೆ ಸಾಗಿ ಪೈಲ್ವಾನ್ ತಿಪ್ಪೇಸ್ವಾಮಿ ಮನೆಯಿಂದ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಮಾಜಿ ನಗರಸಭಾ ಸದಸ್ಯ ರಾಮಚಂದ್ರಪ್ಪರವರ ಮನೆಯ ಮೂಲಕ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸಾಗಿ ದುರ್ಗಾ ಫೈನಾನ್ಸ್ ನಿಂಗಪ್ಪನ ಮನೆಗೆ ಕೊನೆಗೊಂಡು ಪುನಃ ಪಶ್ಚಿಮಾಭಿಮುಖವಾಗಿ ಸಾಗಿ ಸಿಹಿನೀರು ಹೊಂಡದ ಮುಂಭಾಗದ ನಾಲಾಬಂಧ ಇಬ್ರಾಹಿಂಸಾಬ್ ಮನೆವರೆಗೆ |
| 10 | 10 | ಪೂರ್ವಕ್ಕೆ : ಸಿಹಿನೀರು ಹೊಂಡದ ಬಾಗಿಲಿನಿಂದ ಉತ್ತರಾಭಿಮುಖವಾಗಿ ಬಂದು ಹೊಳಲ್ಕೆರೆ ರಸ್ತೆಯಲ್ಲಿರುವ ಸಿದ್ದಪ್ಪನ ಮನೆವರೆಗೂ ಮತ್ತು ಹೊಳಲ್ಕೆರೆ ಗೇಟ್‌ನಿಂದ ಉತ್ತರಾಭಿಮುಖವಾಗಿ ಹೋಗುವ ಚೋಳಗುಡ್ಡ ರಸ್ತೆಯ ಮೂಲಕ ಟಿ.ಎಂ.ಕೆ. ಪೀರ್‌ಸಾಬ್ ಕಾಂಪೌಂಡ್ ಮೂಲೆವರೆಗೆ<br>ಪಶ್ಚಿಮಕ್ಕೆ : ಹೊಳಲ್ಕೆರೆ ರಸ್ತೆಯಲ್ಲಿರುವ ಎಸ್.ಜೆ.ಎಂ. ಕಾಲೇಜ್ ಪಕ್ಕದಿಂದ ನಗರಾಭಿವೃದ್ಧಿ ಪ್ರಾಧಿಕಾರದ ಹೊಸ ಬಡಾವಣೆಯ ರಸ್ತೆಯ ಮೂಲಕ ಉತ್ತರಾಭಿಮುಖವಾಗಿ ಸಾಗಿ ಭೀಮಸಮುದ್ರ ರಸ್ತೆ ದಾಟಿಕೊಂಡು ಚೋಳಗುಡ್ಡದ ಏರಿವರೆಗೆ<br>ಉತ್ತರಕ್ಕೆ : ಹೊಳಲ್ಕೆರೆ ರಸ್ತೆ ಕೋಟೆ ಸ್ಟೇಷನ್ ಎಡಭಾಗಕ್ಕಿರುವ ಸಿದ್ದಪ್ಪನ ಮನೆಯಿಂದ ಪಶ್ಚಿಮಾಭಿಮುಖವಾಗಿ ಸಾಗಿ ಹೊಳಲ್ಕೆರೆ ಟೋಲ್‌ಗೇಟ್ ಮೂಲೆಗಿರುವ ಟೀ ಅಂಗಡಿವರೆಗೆ ಮತ್ತು ಟಿ.ಎಂ.ಕೆ. ಪೀರ್‌ಸಾಬ್ ಕಾಂಪೌಂಡ್ ಪಕ್ಕದಿಂದ ಪಶ್ಚಿಮಾಭಿಮುಖವಾಗಿ ಮಸೀದಿ ಮುಖೇನ ಚಿಕ್ಕ ಕಾಲ್ದಾರಿ ಮೂಲಕ ಏರಿ ಮೇಲಿರುವ ಮೌಜನ್ ಖಾದರ್‌ಸಾಬ್ ಕಟ್ಟಿರುವ ಕಟ್ಟಡ (ಶಾಲೆ) ವರೆಗೆ<br>ದಕ್ಷಿಣಕ್ಕೆ : ಸಿಹಿನೀರಿನ ಹೊಂಡದ ಬಾಗಿಲಿನಿಂದ ಸಿಹಿನೀರು ಹೊಂಡ ಸುತ್ತಿಕೊಂಡು ಆಗ್ರೋ ಫುಡ್ ಫ್ಯಾಕ್ಟರಿ ಮನೆ ಒಳಗೊಂಡು ಹೊಳಲ್ಕೆರೆ ರಸ್ತೆ ಮೂಲಕ ಎಸ್.ಜೆ.ಎಂ. ಕಾಲೇಜ್‌ವರೆಗೆ (ಜ್ಞಾನಭಾರತಿ ಶಾಲೆ ಅಕ್ಕಪಕ್ಕದ ಮನೆಗಳು ಒಳಗೊಂಡಿರುತ್ತವೆ) |
| 11 | 11 | ಪೂರ್ವಕ್ಕೆ : ಹೊಳಲ್ಕೆರೆ ರಸ್ತೆ ಟೋಲ್‌ಗೇಟ್ ಸೇತುವೆ ಮೂಲಕ ಉತ್ತರಾಭಿಮುಖವಾಗಿ ಹರಿದು ಹೋಗುವ ಹಳ್ಳದ ಎಡಭಾಗದ ಮನೆಗಳು ಮತ್ತು ಪಿ ಅಂಡ್ ಟಿ ಕ್ವಾಟ್ರಸ್ ಮನೆಗಳ ಕಾಂಪೌಂಡ್ ಗೋಡೆ ಮುಖೇನ ಎಡಕ್ಕೆ ತಿರುಗಿ ಅಗಸನಕಲ್ಲು ಈದ್ಗಾ ಹಿಂಭಾಗ ಹೊಸ ನೀರಿನ ಟ್ಯಾಂಕ್ ಹಿಂದೆ ಅಯೂಬ್ ರವರ ಮನೆ ಮತ್ತು ಈಶ್ವರ ಕಲ್ಲಿನಿಂದ ಉತ್ತರಾಭಿಮುಖವಾಗಿ ಹಾದು ಹೋಗುವ ಗಾರೆ ಹಟ್ಟಿ ರಸ್ತೆಯ ಎಡಭಾಗದ ಮನೆಗಳು<br>ಪಶ್ಚಿಮಕ್ಕೆ : ಗುಡ್ಡದ ಮೇಲಿರುವ ಮೌಜನ್ ಖಾದರ್‌ಸಾಬ್ (ಶಾಲೆ) ಮನೆಯಿಂದ ಉತ್ತರಾಭಿಮುಖವಾಗಿ ಬರುವ ಎಲ್ಲಾ ಗುಡ್ಡಕ್ಕೆ ಹೊಂದಿ ಕೊಂಡಿರುವ ಮನೆಗಳು<br>ಉತ್ತರಕ್ಕೆ : ಅಗಸನಕಲ್ಲು ಈದ್ಗಾ ಹಿಂಭಾಗದಲ್ಲಿರುವ ಆಯೂಬ್ ರವರ ಮನೆಯಿಂದ ಪಶ್ಚಿಮಾಭಿಮುಖವಾಗಿ ಸಾಗಿ ಈಶ್ವರ ಕಲ್ಲಿನವರೆಗೆ<br>ದಕ್ಷಿಣಕ್ಕೆ : ಟಿ.ಎಂ.ಕೆ. ಕಾಂಪೌಂಡ್ ಮೂಲೆಯಲ್ಲಿರುವ ದ್ಯಾಮಪ್ಪನ ಮನೆಯಿಂದ ಪಶ್ಚಿಮಾಭಿಮುಖವಾಗಿ ಮಸೀದಿ ಪಕ್ಕದಲ್ಲಿರುವ (ಚರಂಡಿ) ಗಲ್ಲಿಯಿಂದ ನೇರವಾಗಿ ಗುಡ್ಡದ ಕಡೆಗೆ ಸಾಗಿ ಮೌಜನ್ ಖಾದರ್‌ಸಾಬ್ ರವರ ಮನೆಯವರೆಗೆ. |

| 1 | 2 | 3 |
|---|---|---|
| 12 | 12 | ಪೂರ್ವಕ್ಕೆ : ಹೊಳಲ್ಕೆರೆ ರಸ್ತೆ ಟೊಲಗೇಟ್ ಬಳಿ ಪ್ರಾರಂಭವಾಗುವ ಹಳ್ಳ ಉತ್ತರಾಭಿಮುಖವಾಗಿ ಸಾಗಿ ಗಣೇಶನ ದೇವಸ್ಥಾನ ಜ್ಞಾನ ವಿಕಾಸ ಶಾಲೆ ಮುಖೇನ ಅಗಸನಕಲ್ಲು ಮುಂಭಾಗದಲ್ಲಿರುವ ಗಿಡಮರವಿರುವ ಖಾಲಿ ಪ್ರವೇಶದಿಂದ ಸಾಗಿ ಎ.ಕೆ.ಕಾಲೊನಿ ಮೂಲೆಯಲ್ಲಿರುವ ಕ್ವಾಲಿಟಿ ಸಾಮಿಲ್‌ವರೆಗೆ. (ಹಳ್ಳ ಗಡಿಯಾಗಿರುತ್ತದೆ)<br>ಪಶ್ಚಿಮಕ್ಕೆ : ಹೊಳಲ್ಕೆರೆ ರಸ್ತೆ ಟೊಲಗೇಟ್‌ನಿಂದ ಉತ್ತರಕ್ಕೆ ಹೋಗುವ ರಸ್ತೆ ಕ್ಯಾಥೇಶ್ವರ ಸಮುದಾಯ ಭವನ ಪೂರ್ವ ಭಾಗದಿಂದ ಪಿ ಅಂಡ್ ಟಿ ಕ್ವಾಟ್ರಸ್ ಒಳಗೊಂಡು ಅಗಸನಕಲ್ಲು ಈದ್ಗಾ ಪಕ್ಕದಲ್ಲಿರುವ ಬಂಡೆ ಪ್ರದೇಶದಿಂದ ಈದ್ಗಾ ಪಶ್ಚಿಮ ದಿಕ್ಕಿನಲ್ಲಿರುವ ಫಾತಿಮಾ ಮಸೀದಿ ಮೂಲಕ ಪಶ್ಚಿಮ ಮುಖವಾಗಿ ಗುಡ್ಡದ ವರೆಗೆ<br>ಉತ್ತರಕ್ಕೆ : ಅಗಸನಕಲ್ಲು ಮುಂಭಾಗದಲ್ಲಿರುವ ಎ.ಕೆ.ಕಾಲೋನಿಯ ಪೂರ್ವ ಮೂಲೆಯಲ್ಲಿರುವ ಕ್ವಾಲಿಟಿ ಸಾಮಿಲ್‌ನಿಂದ ಪಶ್ಚಿಮಾಭಿಮುಖವಾಗಿ ಸಾಗಿ ಉತ್ತರಕ್ಕೆ ತಿರುಗಿ ಡಾ: ಖಲೀಲ್‌ಖಾನ್ ಮನೆ ಮುಂಭಾಗದಿಂದ ಗುಡ್ಡದ ಕಡೆಗೆ ಹೋಗುವ ರಸ್ತೆ<br>ದಕ್ಷಿಣಕ್ಕೆ : ಹೊಳಲ್ಕೆರೆ ರಸ್ತೆ ಟೋಲ್‌ಗೇಟ್ ಬಳಿ ಇರುವ ಸೇತುವೆಯಿಂದ ಪಶ್ಚಿಮಾಭಿಮುಖವಾಗಿ ಸಾಗಿ ಉತ್ತರದ ಕಡೆಗೆ ಸೇರುವ ರಸ್ತೆವರೆಗೆ |
| 13 | 13 | ಪೂರ್ವಕ್ಕೆ : ನೆಹರೂನಗರ 1ನೇ ಕ್ರಾಸ್ ದಕ್ಷಿಣಭಿಮುಖವಾಗಿ ಸಾಗಿ ಮಿಲ್ಲತ್ ಹೈಸ್ಕೂಲ್ ಒಳಗೊಂಡು ಮಾಗನೂರು ಬಸಪ್ಪನವರ ಮೀಲ್‌ವರೆಗೆ<br>ಪಶ್ಚಿಮಕ್ಕೆ : ಹೊಳಲ್ಕೆರೆ ರಸ್ತೆ ಟೋಲ್‌ಗೇಟ್ ಬಳಿ ಇರುವ ಸೇತುವೆಯಿಂದ ಅಗಸನಕಲ್ಲು ಎ.ಕೆ.ಕಾಲೋನಿ ಕೊನೆಯಲ್ಲಿ ಬರುವ ಕ್ವಾಲಿಟಿ ಸಾಮಿಲ್‌ವರೆಗೆ (ಹಳ್ಳ ಗಡಿಯಾಗಿರುತ್ತದೆ)<br>ಉತ್ತರಕ್ಕೆ : ಅಗಸನಕಲ್ಲು ಎ.ಕೆ.ಕಾಲೋನಿ ಪೂರ್ವ ದಿಕ್ಕಿನಲ್ಲಿರುವ ಕ್ವಾಲಿಟಿ ಸಾಮಿಲ್‌ನಿಂದ ಪೂರ್ವಾಭಿಮುಖವಾಗಿ ಸಾಗಿ ನೇರವಾಗಿ ಮಿಲ್ಲತ್ ಹೈಸ್ಕೂಲ್ ಹಿಂಭಾಗದಲ್ಲಿರುವ ಮಾಗನೂರು ಬಸಪ್ಪನವರ ಮಿಲ್ ಕಾಂಪೌಂಡ್‌ವರೆಗೆ<br>ದಕ್ಷಿಣಕ್ಕೆ : ಹೊಳಲ್ಕೆರೆ ರಸ್ತೆ ಟೋಲ್‌ಗೇಟ್ ಬಳಿ ಇರುವ ಸೇತುವೆ ಪಕ್ಕದಲ್ಲಿರುವ ಪರಮೇಶ್ವರಪ್ಪನವರಿಗೆ ಸೇರಿದ ಉತ್ಸವಾಂಭ ನಿಲಯದಿಂದ ಪೂರ್ವಾಭಿಮುಖವಾಗಿ ನೆಹರೂನಗರ 1ನೇ ಕ್ರಾಸ್ ಗೌರಮ್ಮ ಮನೆವರೆಗೆ. |
| 14 | 14 | ಪೂರ್ವಕ್ಕೆ : ಹೊಳಲ್ಕೆರೆ ರಸ್ತೆಯಲ್ಲಿರುವ ಬರಗೇರಮ್ಮ ಬೀದಿ 1ನೇ ಕ್ರಾಸ್‌ನ ಮೂಲೆಯಲ್ಲಿರುವ ಬಸವಂತಪ್ಪನವರ ರಾಘವೇಂದ್ರ ಇಂಜಿನಿಯರಿಂಗ್ ವರ್ಕ್ಸ್‌ನಿಂದ ಉತ್ತರಾಭಿಮುಖವಾಗಿ ಸಾಗಿ ನೈಯಾಜ್ ಆಹ್ಮದ್ ಮನೆ ಕೊನೆಗೊಂಡು ಬರಗೇರಿ ಕೆರೆ ಅಂಗಳದವರೆಗೆ<br>ಪಶ್ಚಿಮಕ್ಕೆ : ಹೊಳಲ್ಕೆರೆ ರಸ್ತೆಯಲ್ಲಿರುವ ನೆಹರೂನಗರ 1ನೇ ಕ್ರಾಸ್ ಮುಕ್ಕಾ ಹೊಟೇಲ್ ಬಲಭಾಗಕ್ಕಿರುವ ಮೂಲೆ ಉತ್ತರಾಭಿಮುಖವಾಗಿ ಸಾಗಿ ಬಲಭಾಗದ ಎಲ್ಲಾ ಮನೆಗಳನ್ನು ಒಳಗೊಂಡು ಮಿಲ್ಲತ್ ಹೈಸ್ಕೂಲ್ ಹಿಂಭಾಗಕ್ಕಿರುವ ಮಾಗನೂರು ಬಸಪ್ಪನವರ ಮಿಲ್ ಕಾಂಪೌಂಡ್‌ವರೆಗೆ<br>ಉತ್ತರಕ್ಕೆ : ಮಿಲ್ಲತ್ ಹೈಸ್ಕೂಲ್ ಹಿಂಭಾಗದಲ್ಲಿರುವ ಮಾಗನೂರು ಬಸಪ್ಪನವರ ಮಿಲ್ ಕಾಂಪೌಂಡ್ ಪೂರ್ವಾಭಿಮುಖವಾಗಿ ಸಾಗಿ ಬರಗೇರಿ ಬೀದಿ 2ನೇ ಕ್ರಾಸ್ ಉತ್ತರಕ್ಕೆ ಕೊನೆಗೊಳ್ಳುವ ಬರಗೇರಿ ಕೆರೆ ಅಂಗಳದವರೆಗೆ<br>ದಕ್ಷಿಣಕ್ಕೆ : ಹೊಳಲ್ಕೆರೆ ರಸ್ತೆಯಲ್ಲಿರುವ ನೆಹರುನಗರದ 1ನೇ ಕ್ರಾಸ್ ಪಕ್ಕದಲ್ಲಿರುವ ಮುಕ್ಕಾ ಹೊಟೇಲ್‌ನಿಂದ ಪೂರ್ವಾಭಿಮುಖವಾಗಿ ಸಾಗಿ ಬರಗೇರಮ್ಮ ಬೀದಿ 1ನೇ ಕ್ರಾಸ್ ಮೂಲೆಯಲ್ಲಿರುವ ಬಸವಂತಪ್ಪನವರ ರಾಘವೇಂದ್ರ ಇಂಜಿನಿಯರಿಂಗ್ ವರ್ಕ್ಸ್‌ವರೆಗೆ |
| 15 | 15 | ಪೂರ್ವಕ್ಕೆ : ಗಾಂಧಿಸರ್ಕಲ್<br>ಪಶ್ಚಿಮಕ್ಕೆ : ಆಜಾದ್ ಮಿಲ್ ಮೂಲೆಯಿಂದ ದಕ್ಷಿಣಾಭಿಮುಖವಾಗಿ ಸಾಗಿ ಅಗಸನಕಲ್ಲು ರಸ್ತೆಯ ಮೂಲಕ ಜಯಂತ್ ಮಿಲ್ ಮೂಲೆಯವರೆಗೆ<br>ಉತ್ತರಕ್ಕೆ : ಚಿತ್ರದುರ್ಗ ನಗರದ ಮಹಾತ್ಮಗಾಂಧಿ ಸರ್ಕಲ್‌ನಿಂದ ಪಶ್ಚಿಮಾಭಿಮುಖವಾಗಿ ಸಾಗಿ ಬಿ.ಡಿ.ರಸ್ತೆ ಮೂಲಕ ಆಜಾದ್ ಮಿಲ್ ಮೂಲೆಯವರೆಗೆ<br>ದಕ್ಷಿಣಕ್ಕೆ : ಮಹಾತ್ಮಗಾಂಧಿ ಸರ್ಕಲ್‌ನಿಂದ ಪೂರ್ವಾಭಿಮುಖವಾಗಿ ಸಾಗಿ ಹೊಳಲ್ಕೆರೆ ರಸ್ತೆ ಬರಗೇರಿ ಬೀದಿ 1ನೇ ಕ್ರಾಸ್ ಮೂಲೆಯಲ್ಲಿರುವ ಹೀರೊ ಹೊಂಡ ಸರ್ವೀಸ್ ಸೆಂಟರ್ ಮೂಲಕ ಉತ್ತರಾಭಿಮುಖವಾಗಿ ಸಾಗಿ ಶಬ್ಬೀರ್ ರವರ ಮನೆಯ ತನಕ ನಂತರ ಜಯಂತಿ ಮಿಲ್‌ನ ಬಯಲು ಪ್ರದೇಶದ ವರೆಗೆ. |
| 16 | 16 | ಪೂರ್ವಕ್ಕೆ : ಬಿ.ಡಿ. ರಸ್ತೆಯಿಂದ ಆಜಾದ್ ಮಿಲ್ ಪಕ್ಕದಲ್ಲಿರುವ ಅಗಸನಕಲ್ಲಿಗೆ ಹೋಗುವ ರಸ್ತೆ ದಕ್ಷಿಣಾಭಿಮುಖವಾಗಿ ಸಾಗಿ ಅಗಸನಕಲ್ಲು ಮೂಲೆಯಲ್ಲಿರುವ ಹೊಸ ಟ್ಯಾಂಕ್ ಪಕ್ಕಕ್ಕೆ ಸೇರುವ ರಸ್ತೆಯವರೆಗೆ<br>ಪಶ್ಚಿಮಕ್ಕೆ : ರೈಲ್ವೆ ಕಛೇರಿ ಹಿಂಭಾಗದಿಂದ ದಕ್ಷಿಣಾಭಿಮುಖವಾಗಿ ಸಾಗಿ ಎಸ್.ಎಂ.ದೇವರಾಜಯ್ಯ ನವರ ಮನೆಯ ಬಯಲು ಪ್ರದೇಶದವರೆಗೆ<br>ಉತ್ತರಕ್ಕೆ : ಬಿ.ಡಿ.ರಸ್ತೆ ಆಜಾದ್ ಮಿಲ್ ಪಕ್ಕದಲ್ಲಿರುವ ಲೇಔಟ್ ಮೂಲೆಯ ಮಹಾವೀರ ನಗರದ ನಾಮಫಲಕ (ಎ.ಪಿ.ಎಂ.ಸಿ. ಮಳಿಗೆಗಳ ಮುಂಭಾಗ) ದಿಂದ ಪಶ್ಚಿಮಾಭಿಮುಖವಾಗಿ ಸಾಗಿ ಕೆ.ಆರ್.ಮುರುಗೇಂದ್ರಪ್ಪನವರ ಮನೆಯ ಮುಖೇನ ರೈಲ್ವೆ ಸ್ಟೇಷನ್ ಮುಂಭಾಗದ ರಸ್ತೆ ಮೂಲಕ ರೈಲ್ವೆ ಸ್ಟೇಷನ್ ಆವರಣದ ಕಾಂಪೌಂಡ್ ಮೂಲೆ ಮಟನ್ ಅಂಗಡಿ ಸತ್ತಾರ್ ಸಾಬ್ ಮನೆವರೆಗೆ<br>ದಕ್ಷಿಣಕ್ಕೆ : ಸದಾನಂದಯ್ಯ ಬಡಾವಣೆಗೆ ಮುಂಭಾಗದಲ್ಲಿ ಎಸ್.ಎಂ.ದೇವರಾಜಯ್ಯನವರ ಮನೆ ಮತ್ತು ಲೇಔಟ್‌ನಿಂದ ಪೂರ್ವಾಭಿಮುಖವಾಗಿ ಅಗಸನಕಲ್ಲು ಮೂಲೆಯಲ್ಲಿರುವ ಹೊಸ ಟ್ಯಾಂಕ್‌ವರೆಗೆ |
| 17 | 17 | ಪೂರ್ವಕ್ಕೆ : ದಾವಣಗೆರೆ ರಸ್ತೆ ರೈಲ್ವೆ ಕ್ರಾಸಿಂಗ್‌ನಿಂದ ರೈಲ್ವೆ ಸ್ಟೇಷನ್ ರಸ್ತೆವರೆಗೆ<br>ಪಶ್ಚಿಮಕ್ಕೆ : ವಿಜಯಲಕ್ಷ್ಮಿ ಕಾಟನ್ ಮಿಲ್ ಕಾಂಪೌಂಡ್ ಮೂಲೆಯಿಂದ ಮಠದ ಮುಂಭಾಗದ ಕೆರೆ ಹೊರತುಪಡಿಸಿ ಜಯಲಕ್ಷ್ಮಿ ಲೇಔಟ್ ಕ್ರಾಸ್ ರಸ್ತೆ ಮುಂಭಾಗದಿಂದ ಪಶ್ಚಿಮಾಭಿಮುಖವಾಗಿ ಎನ್.ಹೆಚ್.13 ರಸ್ತೆ ಆಶ್ರಯ ಲೇಔಟ್‌ವರೆಗೆ<br>ಉತ್ತರಕ್ಕೆ : ದಾವಣಗೆರೆ ರಸ್ತೆ ರೈಲ್ವೆ ಕ್ರಾಸಿಂಗ್‌ನಿಂದ ಪಶ್ಚಿಮಾಭಿಮುಖವಾಗಿ ಸಾಗಿ ಬೈಪಾಸ್‌ನಿಂದ ಬಂದು ಸೇರುವ ಸರ್ಕಲ್ ಬಳಿ ಇರುವ ವಿಜಯಲಕ್ಷ್ಮಿ ಕಾಟನ್ ಮಿಲ್ ಕಾಂಪೌಂಡ್‌ವರೆಗೆ<br>ದಕ್ಷಿಣಕ್ಕೆ : ರೈಲ್ವೆ ಸ್ಟೇಷನ್ ರಸ್ತೆಯ ಮೂಲಕ ರೈಲ್ವೆ ಸ್ಟೇಷನ್ ಒಳಗೊಂಡು ರೈಲ್ವೆ ಹಳಿ ಮೂಲಕ ಹೊಸದಾಗಿ ರಚಿಸಿರುವ ಆಶ್ರಯ ಲೇಔಟ್ ಮೂಲೆವರೆಗೆ<br>ಷರಾ:– ಈ ಚಕ್ಕುಬಂದಿ ಮಧ್ಯ ಬರುವ ಗಾರೆಹಟ್ಟಿ ಪ್ರದೇಶ ಹೊರತುಪಡಿಸಿರುತ್ತದೆ. |

| 1 | 2 | 3 |
|---|---|---|
| 18 | 18 | ಪೂರ್ವಕ್ಕೆ : ನಗರಸಭೆಗೆ ಸೇರಿರುವ ಟೂರಿಸ್ಟ್ ಹೊಟೇಲ್‌ನಿಂದ ಉತ್ತರಾಭಿಮುಖವಾಗಿ ಸಾಗಿ ಅಂದರೆ ಮೆದೇಹಳ್ಳಿ ರಸ್ತೆ ನೇರವಾಗಿ ರೈಲ್ವೆ ಕ್ರಾಸ್ ಮುಖೇನ ಎನ್.ಹೆಚ್.4 ಬೈಪಾಸ್ ರಸ್ತೆವರೆಗೆ<br>ಪಶ್ಚಿಮಕ್ಕೆ : ದಾವಣಗೆರೆ ರಸ್ತೆ ಮತ್ತು ಎನ್.ಹೆಚ್.4 ಬೈಪಾಸ್ ರಸ್ತೆ ಬಂದು ಸೇರುವ ಸರ್ಕಲ್<br>ಉತ್ತರಕ್ಕೆ : ದಾವಣಗೆರೆ ರಸ್ತೆ ಮತ್ತು ಎನ್.ಹೆಚ್.4 ಬೈಪಾಸ್ ರಸ್ತೆ ಸರ್ಕಲ್‌ನಿಂದ ಪೂರ್ವಾಭಿಮುಖವಾಗಿ ಸಾಗಿ ದಕ್ಷಿಣದ ಕಡೆಗೆ ತಿರುಗುವ ಎ.ಪಿ.ಎಂ.ಸಿ. ಮೂಲೆಯ ಕಾಂಪ್ಲೆಕ್ಸ್<br>ದಕ್ಷಿಣಕ್ಕೆ : ದಾವಣಗೆರೆ ರಸ್ತೆ ಮತ್ತು ಎನ್.ಹೆಚ್.4 ಬೈಪಾಸ್ ರಸ್ತೆ ಸೇರುವ ಸರ್ಕಲ್‌ನಿಂದ ಪೂರ್ವಾಭಿಮುಖವಾಗಿ ಸಾಗಿ ಜಿ.ಹೆಚ್.ಆರ್. ಕಾಂಪೌಂಡ್ ಲೇಡಿಸ್ ಹಾಸ್ಟೆಲ್ ಮೂಲಕ ನಗರಸಭೆಗೆ ಸೇರಿರುವ ಟೂರಿಸ್ಟ್ ಹೊಟೇಲ್‌ವರೆಗೆ. |
| 19 | 19 | ಪೂರ್ವಕ್ಕೆ : ಕ್ರಸೆಂಟ್ ಸ್ಕೂಲ್ ಮುಂಭಾಗದ ಖಾಸಿಂಸಾಬ್ ತೋಟದ ಪಕ್ಕದಿಂದ ಹರಿದು ಹೋಗುವ ದೊಡ್ಡಚರಂಡಿಯ ಉತ್ತರಾಭಿಮುಖವಾಗಿ ಎನ್.ಹೆಚ್.4 ರಲ್ಲಿರುವ ಮಸೀದಿ ಹಿಂಭಾಗದಲ್ಲಿರುವ ಶೌಚಾಲಯದವರೆಗೆ (ಚರಂಡಿ ಸರಹದ್ದಾಗಿರುತ್ತದೆ)<br>ಪಶ್ಚಿಮಕ್ಕೆ : ಮೆದೇಹಳ್ಳಿ ರಸ್ತೆ ವೆಂಕಟೇಶ್ವರ ಟಾಕೀಸ್ ಮೂಲೆಯಲ್ಲಿರುವ ಮಹಮ್ಮದ್ ಗೌಸ್‌ರವರ ಮಳಿಗೆಗಳಿಂದ ಉತ್ತರಾಭಿಮುಖವಾಗಿ ಆದರ್ಶ ಕಲ್ಯಾಣ ಮಂಟಪ ಮತ್ತು ರೈಲ್ವೆ ಹಳಿಗಳ ಮುಖೇನ ಆನಂದ ಸರ್ವೀಸ್ ಸ್ಟೇಷನ್ ಪಕ್ಕದ ವೆಂಕಟೇಶ್ವರ ಇಂಜಿನಿಯರಿಂಗ್ ವರ್ಕ್ಸ್ ವರೆಗೆ<br>ಉತ್ತರಕ್ಕೆ : ಮೆದೇಹಳ್ಳಿ ರಸ್ತೆ ಕೊನೆಯಲ್ಲಿರುವ ಫ್ಲೈಓವರ್ ಪಕ್ಕದಲ್ಲಿರುವ ವೆಂಕಟೇಶ್ವರ ಇಂಜಿನಿಯರಿಂಗ್ ವರ್ಕ್ಸ್‌ನಿಂದ ಎನ್.ಹೆಚ್. 4 ಪಕ್ಕದ ಸರ್ವೀಸ್ ರೋಡ್ ಮುಖೇನ ಎನ್.ಹೆಚ್.4 ಮಸೀದಿ ಹಿಂಭಾಗದಲ್ಲಿರುವ ಸಾರ್ವಜನಿಕ ಶೌಚಾಲಯದವರೆಗೆ<br>ದಕ್ಷಿಣಕ್ಕೆ : ಮೆದೇಹಳ್ಳಿ ರಸ್ತೆಯಲ್ಲಿ ಮೂಲೆಯಲ್ಲಿರುವ ಮಹಮ್ಮದ ಗೌಸ್ ಇವರ ಮಳಿಗೆಗಳಿಂದ ನೇರವಾಗಿ ವೆಂಕಟೇಶ್ವರ ಚಿತ್ರಮಂದಿರದ ಮೂಲಕ ಪೂರ್ವಾಭಿಮುಖವಾಗಿ ಸಾಗಿ ಬಿ.ಎ ಖಾಸಿಂಸಾಬ್ ರವರ ತೋಟದ ಮೂಲೆಯವರೆಗೆ |
| 20 | 20 | ಪೂರ್ವಕ್ಕೆ : ಉತ್ತರಾಭಿಮುಖವಾಗಿ ಗೋಪಾಲಪುರ ರಸ್ತೆ ಪ್ರಾರಂಭದ ಮೂಲೆಯಲ್ಲಿರುವ ರೇಣುಕಾಂಭ ದೇವಸ್ಥಾನದಿಂದ ನೇರವಾಗಿ ಉತ್ತರದ ಕಡೆಗೆ ಸಾಗಿ ಹಳೇ ಪೊಲೀಸ್ ಕ್ವಾಟ್ರಸ್ ಮೂಲಕ (ಎನ್.ಹೆಚ್.4 ಸರ್ವೀಸ್ ರಸ್ತೆವೆರೆಗೆ)<br>ಪಶ್ಚಿಮಕ್ಕೆ : ಕ್ರೆಸೆಂಟ್ ಸ್ಕೂಲ್ ಮೂಲೆಯಲ್ಲಿರುವ ಸೇತುವೆ ಮೂಲಕ ಉತ್ತರಾಭಿಮುಖವಾಗಿ ಸಾಗಿ ಎನ್.ಹೆಚ್.4 ಮಸೀದಿವರೆಗೆ ಹರಿದು ಹೋಗುವ ಚರಂಡಿವರೆಗೆ (ಪಶ್ಚಿಮ ದಿಕ್ಕಿಗೆ ಪೂರ ಚರಂಡಿ ಗಡಿಯಾಗಿರುತ್ತದೆ.)<br>ಉತ್ತರಕ್ಕೆ : ಎನ್.ಹೆಚ್.4 ಸರ್ವೀಸ್ ರಸ್ತೆ ಮೂಲೆ ಮಸೀದಿಯಿಂದ ಪೂರ್ವಾಭಿಮುಖವಾಗಿ ಗೋಪಾಲಪುರ ರಸ್ತೆ ಮೂಲೆಯಲ್ಲಿರುವ ಕೆ.ಜಿ.ಎನ್. ಲಾರಿ ಆಫೀಸ್‌ವರೆಗೆ<br>ದಕ್ಷಿಣಕ್ಕೆ : ಗೋಪಾಲಪುರ ರಸ್ತೆ ಪ್ರಾರಂಭದಲ್ಲಿರುವ ರೇಣುಕಾ ದೇವಸ್ಥಾನದಿಂದ ಪಶ್ಚಿಮಾಭಿಮುಖವಾಗಿ ರಿಜಿನಲ್ ಸ್ಕೂಲ್ ಮೂಲಕ ಮೂಲೆಯಲ್ಲಿರುವ ಕ್ರೆಸೆಂಟ್ ಸ್ಕೂಲ್‌ರವರ ಮನೆಯವರೆಗೆ |
| 21 | 21 | ಪೂರ್ವಕ್ಕೆ : ಜೆ.ಸಿ.ಆರ್.ಮುಖ್ಯರಸ್ತೆ (ಎನ್.ಹೆಚ್.13) ನಗರಸಭೆ ಮಾರುಕಟ್ಟೆ ಪಕ್ಕದಲ್ಲಿರುವ ಮಾಸ್ಟರ್ ಸಿದ್ದಪ್ಪನವರ ಬಿಲ್ಡಿಂಗ್‌ನಿಂದ ಉತ್ತರಾಭಿಮುಖವಾಗಿ ಸಾಗಿ ಎನ್.ಹೆಚ್.4 ಸರ್ವಿಸ್ ರಸ್ತೆಯ ಪಕ್ಕದಲ್ಲಿ ತಿರುಮಲ ರೆಸ್ಟೋರಂಟ್‌ವರೆಗೆ<br>ಪಶ್ಚಿಮಕ್ಕೆ : ಗೋಪಾಲಪುರ ಮುಖ್ಯರಸ್ತೆ ದರ್ಜಿಕಾಲೋನಿ 1ನೇ ಕ್ರಾಸ್‌ನಿಂದ ಉತ್ತರಾಭಿಮುಖವಾಗಿ ಸಾಗಿ ಗೋಪಾಲಪುರ ರಸ್ತೆ ಕೊನೆಗೊಂಡು ಎನ್.ಹೆಚ್.4 ಸರ್ವೀಸ್ ರಸ್ತೆ ಮೂಲೆಯಲ್ಲಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮೂಲೆವರೆಗೆ<br>ಉತ್ತರಕ್ಕೆ : ಗೋಪಾಲಪುರ ಮುಖ್ಯರಸ್ತೆ ಕೊನೆಗೊಳ್ಳುವ ಮೂಲೆಯಿಂದ ಎನ್.ಹೆಚ್.4 ಪಕ್ಕದ ಸರ್ವೀಸ್ ರಸ್ತೆ ಮುಖಾಂತರ ಪೂರ್ವಾಭಿಮುಖವಾಗಿ ಬಲ ಮೂಲೆಯಲ್ಲಿರುವ ತಿರುಮಲ ರೆಸ್ಟೋರೆಂಟ್‌ವರೆಗೆ ಮತ್ತು<br>ದಕ್ಷಿಣಕ್ಕೆ : ಎನ್.ಹೆಚ್. 13 ಪೊಲೀಸ್ ವಸತಿ ಗೃಹಗಳು ಮತ್ತು ಬಲಭಾಗದ ಮನೆಗಳು.<br>ಗೋಪಾಲಪುರ ಮುಖ್ಯ ರಸ್ತೆಯಿಂದ ಪ್ರಾರಂಭವಾಗುವ ದರ್ಜಿಕಾಲೋನಿ 1ನೇ ಕ್ರಾಸ್‌ನಿಂದ ಪೂರ್ವಾಭಿಮುಖವಾಗಿ ಬಾರ್ ಬೈಂಡರ್ ಬಾಷಸಾಬ್ ಮನೆ ಕೊನೆಗೊಂಡು ನಂತರ ಉತ್ತರಾಭಿಮುಖವಾಗಿ ಡಾ: ಪ್ರಭಾಕರ್ (ಸೀತಾ ಕ್ಲಿನಿಕ್) ಮನೆ ಕನ್ಸರ್‌ವೆನ್ಸಿ ಮೂಲಕ ಬಂದು ಹಳೇ ಆದಾಯ ತೆರಿಗೆ ಕಛೇರಿಯವರೆಗೆ (ಮಾಸ್ಟರ್ ಸಿದ್ದಪ್ಪ ಬಿಲ್ಡಿಂಗ್) |
| 22 | 22 | ಪೂರ್ವಕ್ಕೆ : ತುರುವನೂರು ರಸ್ತೆ (ಆರ್.ಟಿ.ಓ.ಕಛೇರಿ ರಸ್ತೆ) ಕೆ.ಇ.ಬಿ. ಕ್ವಾಟ್ರಸ್ ಮೂಲೆಯಿಂದ ಉತ್ತರಾಭಿಮುಖವಾಗಿ ಸಾಗಿ ಎನ್.ಹೆಚ್. 4 ವರೆಗೆ<br>ಪಶ್ಚಿಮಕ್ಕೆ : ಅರಣ್ಯ ಇಲಾಖೆಯ ಕಛೇರಿಯಿಂದ (ಹೊಸ ನೀರಿನ ಟ್ಯಾಂಕ್) ಉತ್ತರಾಭಿಮುಖವಾಗಿ ಸಾಗಿ ಜೆ.ಸಿ.ಆರ್.ಸರ್ಕಲ್ ಮೂಲಕ ಫ್ಲೈಓವರ್ ಹತ್ತಿರ ಇರುವ ಹಳೇ ಪ್ಯಾರಡೈಸ್ ಹೊಟೇಲ್ ಮೂಲೆಯವರೆಗೆ<br>ಉತ್ತರಕ್ಕೆ : ಕೆ.ಇ.ಬಿ. ಗೇಸ್ಟ್ ಹೌಸ್ ಮೂಲೆಯಿಂದ ಪಶ್ಚಿಮಾಭಿಮುಖವಾಗಿ ಸಾಗಿ ಎನ್.ಹೆಚ್.4 ಮೂಲಕ ಬಂದು ಸರ್ವೀಸ್ ರಸ್ತೆಯಲ್ಲಿನ ಹಳೇ ಪ್ಯಾರಡೈಸ್ ಹೊಟೇಲ್‌ವರೆಗೆ<br>ದಕ್ಷಿಣಕ್ಕೆ : ಅರಣ್ಯ ಕಛೇರಿಯಿಂದ ಪೂರ್ವಾಭಿಮುಖವಾಗಿ ಸಾಗಿ ಕೆ.ಇ.ಬಿ. ಕ್ವಾಟ್ರಸ್ ಮೂಲೆಯವರೆಗೆ. |

| 1 | 2 | 3 |
|---|---|---|
| 23 | 23 | ಪೂರ್ವಕ್ಕೆ : ಕ್ರೆಸೆಂಟ್ ಶಾಲೆ ಮುಂಭಾಗದಲ್ಲಿರುವ ವುಡ್‌ಪ್ಲೈನಿಂಗ್ ಷಾಪ್‌ನಿಂದ ದಕ್ಷಿಣಾಭಿಮುಖವಾಗಿ ಸಾಗಿ ಭಾರತ್ ವುಡ್‌ಪ್ಲೈನಿಂಗ್ ಷಾಪ್ ವರೆಗೆ ಮತ್ತು ಅಂಜುಮನ್ ರಸ್ತೆ, ಚಾಲಿಕಟ್ಟೆ ಮನೆ ಹಿಂಭಾಗ ಇರುವ ಗಿರಿಯಪ್ಪನ ಮನೆಯಿಂದ ದಕ್ಷಿಣಾಭಿಮುಖವಾಗಿ ಅಂಜುಮನ್ ಮುಂಭಾಗದಿಂದ ಸಾಗಿ ಕೊಹಿನೂರು ಆಟೋ ಮೊಬೈಲ್ಸ್‌ವರೆಗೆ<br>ಪಶ್ಚಿಮಕ್ಕೆ : ಮದೇಹಳ್ಳಿ ರಸ್ತೆಯಿಂದ ವೆಂಕಟೇಶ್ವರ ಟಾಕೀಸ್‌ಗೆ ಹೋಗುವ ರಸ್ತೆ ಮೂಲೆಯಲ್ಲಿರುವ ಸೊಮನಾಥ್ ಮಳಿಗೆಗಳಿಂದ ದಕ್ಷಿಣಾಭಿಮುಖವಾಗಿ ಸಾಗಿ ಜಟಕಾ ನಿಲ್ದಾಣದ ಪಕ್ಕದಲ್ಲಿರುವ ಮಿನಿ ತರಕಾರಿ ಮಾರುಕಟ್ಟೆವರೆಗೆ<br>ಉತ್ತರಕ್ಕೆ : ಮದೇಹಳ್ಳಿ ರಸ್ತೆ ಮೂಲೆಯಲ್ಲಿರುವ ಸೋಮನಾಥ್ ಇವರ ಮಳಿಗೆಗಳಿಂದ ಪೂರ್ವಾಭಿಮುಖವಾಗಿ ಸಾಗಿ ವೆಂಕಟೇಶ್ವರ ಟಾಕೀಸ್ ಮೂಲಕ ಕ್ರಸೆಂಟ್ ಸ್ಕೂಲ್ ಮುಂಭಾಗಕ್ಕಿರುವ ವುಡ್‌ಪ್ಲೈನಿಂಗ್ ಷಾಪ್‌ವರೆಗೆ ಮತ್ತು ದೊಡ್ಡ ಚರಂಡಿ ಪಕ್ಕದಲ್ಲಿರುವ ಚರ್ಮದ ಇಕ್ಬಾಲ್‌ಸಾಬ್ ಮನೆಯಿಂದ ಪೂರ್ವಾಭಿಮುಖವಾಗಿ ಸಾಗಿ ಅಂಜುಮಾನ್ ರಸ್ತೆ ಪ್ರಾರಂಭಕ್ಕಿರುವ ಗಿರಿಯಪ್ಪನ ಮನೆವರೆಗೆ<br>ದಕ್ಷಿಣಕ್ಕೆ : ಮದೇಹಳ್ಳಿ ರಸ್ತೆ ಮೂಲೆಗಿರುವ ಮಿನಿ ಮಾರ್ಕೇಟ್‌ನಿಂದ ಪೂರ್ವಾಭಿಮುಖವಾಗಿ ಸಂತೆಹೊಂಡ ಹಾಗೂ ಅಮೋಘ ಕಾಂಪ್ಲೆಕ್ಸ್ ಮುಖೇನ ಸಾಗಿ ಬಸವೇಶ್ವರ ರಸ್ತೆಯಲ್ಲಿರುವ ಕೋಹಿನೂರು ಆಟೋಮೊಬೈಲ್ಸ್‌ವರೆಗೆ. |
| 24 | 24 | ಪೂರ್ವಕ್ಕೆ : ಜೆ.ಜೆ.ಹಟ್ಟಿ ಟ್ಯಾಂಕ್ ದಕ್ಷಿಣದ ಕಡೆ ಇರುವ ಮಹಮ್ಮದ್ ನಯಿಮುಲ್ಲಾ ಇವರ ಮೂಲೆ ಮನೆಯಿಂದ ಉತ್ತರಾಭಿಮುಖವಾಗಿ ಸಾಗಿ ಖಯೂಂಸಾಬ್ ಕಿರಾಣಿ ಅಂಗಡಿ ಮೂಲಕ ನೇರವಾಗಿ ಗಲ್ಲಿ ಮೂಲಕ ಜೆ.ಸಿ.ಆರ್. 1ನೇ ಕ್ರಾಸ್ ಮೂಲೆಗಿರುವ ಹಿಮ್ಮತ್ ನಗರ ಅಂಗನವಾಡಿ ಕೇಂದ್ರದವರೆಗೆ<br>ಪಶ್ಚಿಮಕ್ಕೆ : ಗೋಪಾಲಪುರ ಮುಖ್ಯ ರಸ್ತೆಯಲ್ಲಿರುವ ಜೆ.ಟಿ.ಹನುಮಂತರಾವ್ ಮಳಿಗೆ ಕಿರಾಣಿ ಅಂಗಡಿ ಮೂಲೆಯಿಂದ ನೇರವಾಗಿ ಉತ್ತರಾಭಿಮುಖವಾಗಿ ಸಾಗಿ ದರ್ಜಿ ಕಾಲೋನಿ 1ನೇ ಕ್ರಾಸ್ ಹಿಂಭಾಗದಲ್ಲಿರುವ ಮೂಲೆಯವರೆಗೂ (ಪ್ಯಾರಿಮಾ ಮನೆ ಮುಂಭಾಗ)<br>ಉತ್ತರಕ್ಕೆ : ಗೋಪಾಲಪುರ ರಸ್ತೆ ದರ್ಜಿ ಕಾಲೋನಿ 1ನೇ ಕ್ರಾಸ್ ದಕ್ಷಿಣ ಭಾಗದ ಮನೆಗಳ ಮೂಲಕ ಪೂರ್ವಾಭಿಮುಖವಾಗಿ ಸಾಗಿ ಎಡಭಾಗಕ್ಕೆ ತಿರುಗಿ ಮತ್ತೆ ಉತ್ತರಾಭಿಮುಖವಾಗಿ ಸಾಗಿ ಜೆ.ಸಿ.ಆರ್. 1ನೇ ಕ್ರಾಸ್ ದಕ್ಷಿಣ ಭಾಗದಲ್ಲಿರುವ ಸಣ್ಣ ಗಲ್ಲಿ ಮೂಲಕ ಪೂರ್ವಾಭಿಮುಖವಾಗಿ ಸಾಗಿ ಹಿಮ್ಮತ್ ನಗರ ಅಂಗನವಾಡಿ ಕೇಂದ್ರದವರೆಗೆ<br>ದಕ್ಷಿಣಕ್ಕೆ : ಜೆ.ಜೆ.ಹಟ್ಟಿ ಟ್ಯಾಂಕ್ ಮುಂಭಾಗದಲ್ಲಿರುವ ಸೈಮುಲ್ಲಾ ಮನೆಯಿಂದ ಪಶ್ಚಿಮಾಭಿಮುಖವಾಗಿ ಬಡ್ಡಿ ರಾಜಣ್ಣ ಮೂಲೆ ಮನೆ ಬಲಕ್ಕೆ ಉತ್ತರಾಭಿಮುಖವಾಗಿ ಸಾಗಿ ಎಡಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಸಾಗಿ ಗೋಪಾಲಪುರ ಮುಖ್ಯರಸ್ತೆ ಮೂಲೆಯಲ್ಲಿರುವ ಜೆ.ಟಿ.ಹನುಮಂತರಾವ್ ಕಟ್ಟಡದವರೆಗೆ. |
| 25 | 25 | ಪೂರ್ವಕ್ಕೆ : ಫಾರೆಸ್ಟ್ ಆಫೀಸ್‌ಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಜೆ.ಜೆ.ಹಟ್ಟಿ ಕ್ರಾಸ್‌ನಿಂದ ಉತ್ತರಾಭಿಮುಖವಾಗಿ ಸಾಗಿ ದೂರವಾಣಿ ಕೇಂದ್ರ ಹಾಗೂ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮೂಲಕ ಸಾಗಿ ಎಡಭಾಗಕ್ಕೆ ತಿರುಗುವ ಚಿಕ್ಕ ಗಲ್ಲಿ ಹಮ್ಮಿದ್ ಸಾಬ್ ಇವರ ಮೂಲೆ ಮನೆವರೆಗೆ<br>ಪಶ್ಚಿಮಕ್ಕೆ : ಅಹ್ಮದ್ ರಜ್ವಾ ಸರ್ಕಲ್ ಮುಂಭಾಗವಿರುವ ಘನಿಸಾಬ್ ಇವರ ಮಳಿಗೆ ಕಿರಾಣಿ ಅಂಗಡಿಯಿಂದ ಉತ್ತರಾಭಿಮುಖವಾಗಿ ಆಜಾದ್‌ನಗರದ ಕಡೆ ಸಾಗಿ ಬ್ಯಾಂಕ್ ಚಂದ್ರಪ್ಪನ ಮನೆ ಮೂಲೆವೆಗೆ ಮತ್ತು ಪ್ಲಾನರ್ ಅತಾವುಲ್ಲಾ ಮನೆಯಿಂದ ಉತ್ತರಾಭಿಮುಖವಾಗಿ ಜೆ.ಜೆ.ಹಟ್ಟಿ ಟ್ಯಾಂಕ್ ಮೂಲಕ ಹಿಮ್ಮತ್ ನಗರ ಕಡೆ ಹೋಗುವ ರಸ್ತೆಗೆ ಸಾಗಿ ಇಬ್ರಾಹಿಂ ಸಾಬ್ ಮೂಲೆ ಮನೆವರೆಗೆ<br>ಉತ್ತರಕ್ಕೆ : ಹಿಮ್ಮತ್ ನಗರದಲ್ಲಿರುವ ಆಂಜನೇಯ ಗುಡಿ ಹತ್ತಿರವಿರುವ ಇಬ್ರಾಹಿಂ ಸಾಬ್ ಮನೆಯಿಂದ ಪೂರ್ವದ ಕಡೆಗೆ ಹೋಗುವ ಹಮ್ಮೀದ್ ಸಾಬ್ ಮನೆವರೆಗೆ 3' ಗಲ್ಲಿ ಮತ್ತು ಟ್ಯಾಂಕ್ ಬಳಿ ಇರುವ ಖಾದ್ರಿಸಾಬ್ ಮೂಲೆ ಮನೆಯಿಂದ ಪಶ್ಚಿಮಾಭಿಮುಖವಾಗಿ ಸಾಗಿ ಬ್ಯಾಂಕ್ ಚಂದ್ರಪ್ಪ ಇವರ ಮನೆವರೆಗೆ<br>ದಕ್ಷಿಣಕ್ಕೆ : ಅಹ್ಮದ್ ರಜ್ವಾ ಸರ್ಕಲ್ ಮುಂಭಾಗದ ಕಿರಾಣಿ ಅಂಗಡಿಯಿಂದ ಪೂರ್ವಾಭಿಮುಖವಾಗಿ ಫಾರೆಸ್ಟ್ ಆಫೀಸ್ ರಸ್ತೆ ಜೆ.ಜೆ.ಹಟ್ಟಿ ಕ್ರಾಸ್‌ವರೆಗೆ |
| 26 | 26 | ಪೂರ್ವಕ್ಕೆ : ವಿದ್ಯಾವಿಕಾಸ ಶಾಲೆ ಮುಂಭಾಗದಲ್ಲಿರುವ ಪ್ರದ್ಯುಮ್ನ ಕಾಂಪ್ಲೆಕ್ಸ್‌ನಿಂದ ಉತ್ತರಾಭಿಮುಖವಾಗಿ ಬಡಾಮಕಾನ್ ರಸ್ತೆ ಮೂಲಕ ಸಾಗಿ ಮೂಲೆಗಿರುವ ವರ್ಕ್‌ಷಾಪ್ ಮತ್ತು ಹೊರಪೇಟೆ ಮಸೀದಿ ರಸ್ತೆಯಲ್ಲಿರುವ ರಜಾಕ್ ಸಾಬ್ ಕಾಂಪ್ಲೆಕ್ಸ್‌ನಿಂದ ಉತ್ತ್ರಾಭಿಮುಖವಾಗಿ ಸಾಗಿ ಆಜಾದ್‌ನಗರ ಟಿಂಬರ್ ಅನ್ವರ್‌ಸಾಬ್ ಮನೆವರೆಗೆ<br>ಪಶ್ಚಿಮಕ್ಕೆ : ಬಸವೇಶ್ವರ ರಸ್ತೆಯಲ್ಲಿರುವ ಇಲಾಹಿ ಮಜ್ಜಿಲ್‌ನಿಂದ ಉತ್ತರಾಭಿಮುಖವಾಗಿ ಸಾಗಿ ಅಂಜುಮಾನ್ ಬಿಲ್ಡಿಂಗ್ ಮುಖೇನ ಸಾಗಿ ಎಡಭಾಗಕ್ಕೆ ತಿರುಗಿ ಪುನಃ ಬಲಭಾಗಕ್ಕೆ ತಿರುಗಿ ಗೋಪಾಲಪುರ ರಸ್ತೆ ಮೂಲೆ ಕೃಷ್ಣಾಸಾಗರ ಬೇಕರಿಯಿಂದ ಆಜಾದ್‌ನಗರ ಕ್ರಾಸ್ ಮೂಲೆಗಿರುವ ಶಿವಣ್ಣನ ಮನೆವರೆಗೆ<br>ಉತ್ತರಕ್ಕೆ : ಆಜಾದ್‌ನಗರ ಮೂಲೆಗಿರುವ ಶಿವಣ್ಣನ ಮನೆಯಿಂದ ಪೂರ್ವಾಭಿಮುಖವಾಗಿ ವಜೀರ್ ಮಟನ್ ಸ್ಟಾಲ್ ಮೂಲಕ ಸಾಗಿ ಟಿಂಬರ್ ಅನ್ವರ್ ಸಾಬ್ ಮನೆವರೆಗೆ<br>ದಕ್ಷಿಣಕ್ಕೆ : ಬಸವೇಶ್ವರ ಟಾಕೀಸ್ ರಸ್ತೆಯ ಮೂಲೆಯಲ್ಲಿರುವ ಜಲೀಲ್‌ಸಾಬ್ ರವರ ಇಲಾಹಿ ಮಜ್ಜಿಲ್‌ನಿಂದ ಪೂರ್ವಾಭಿಮುಖವಾಗಿ ಡಿ.ಸಿ. ಬಂಗ್ಲೆ ಕಡೆ ಸಾಗಿ ವಿದ್ಯಾವಿಕಾಸ ಶಾಲೆ ಮೂಲೆಯಲ್ಲಿರುವ ಪ್ರದ್ಯುಮ್ನ ಕಾಂಪ್ಲೆಕ್ಸ್‌ವರೆಗೆ. |
| 27 | 27 | ಪೂರ್ವಕ್ಕೆ : ಜೆ.ಸಿ.ಆರ್. ಮುಖ್ಯರಸ್ತೆ ಮುನ್ಸಿಪಲ್ ಮಾರ್ಕೇಟ್ ಪಕ್ಕದಲ್ಲಿರುವ ಮಾಸ್ವರ್ ಸಿದ್ದಪ್ಪ ಬಿಲ್ಡಿಂಗ್‌ನಿಂದ ದಕ್ಷಿಣಾಭಿಮುಖವಾಗಿ ಸಾಗಿ ಗಾಯಿತ್ರಿ ಸರ್ಕಲ್‌ನಲ್ಲಿರುವ ಎಸ್.ಟಿ.ವಾಸುದೇವರೆಡ್ಡಿ ರವರಿಗೆ ಸೇರಿದ (ಪೆಟ್ರೋಲ್ ಬಂಕ್) ವರೆಗೆ<br>ಪಶ್ಚಿಮಕ್ಕೆ : ವಿದ್ಯಾವಿಕಾಸ ಸ್ಕೂಲ್‌ನಿಂದ ಉತ್ತರಾಭಿಮುಖವಾಗಿ ಬಡಾ ಮಕನ್ ರಸ್ತೆ ಮೂಲಕ ಸಾಗಿ ಸಾದತ್ ಸೈಕಲ್ ಷಾಪ್‌ವರೆಗೆ ಜೆ.ಜೆ.ಹಟ್ಟಿ ಮುಖ್ಯರಸ್ತೆ ಮೂಲೆಯಿಂದ ಉತ್ತರಾಭಿಮುಖವಾಗಿ ಬಿ.ಎಸ್.ಎನ್.ಎಲ್. ದೂರವಾಣಿ ಕೇಂದ್ರ ಮೂಲಕ ಹಾಫೀಜ್ ಸೂರತಿಸಾಬ್ ಮನೆ ಸುತ್ತುವರಿದು ಸಾರ್ವಜನಿಕ ಶೌಚಾಲಯ ಮುಂಭಾಗದಿಂದ ಸಾಗಿ ವೆಂಕಟೇಶಪ್ಪ ಮನೆಗೆ ಕೊನೆಗೊಳ್ಳುತ್ತದೆ.<br>ಉತ್ತರಕ್ಕೆ : ಹಿಮ್ಮತ್ ನಗರ (ಡಾ: ಪ್ರಭಾಕರ್ ಮನೆ ಹಿಂಭಾಗ) ವೆಂಕಟೇಶಪ್ಪನ ಮನೆ ಮೂಲಕ ಪೂರ್ವಾಭಿಮುಖವಾಗಿ ಸಾಗುವ ಚಿಕ್ಕ ಗಲ್ಲಿ ಮಾಸ್ವರ್ ಸಿದ್ದಪ್ಪನ (ಜೆ.ಸಿ.ಆರ್. ರಸ್ತೆಯಲ್ಲಿರುವ) ಬಿಲ್ಡಿಂಗ್‌ವರೆಗೆ<br>ದಕ್ಷಿಣಕ್ಕೆ : ವಿದ್ಯಾವಿಕಾಸ ವಿದ್ಯಾಸಂಸ್ಥೆ ಮೂಲೆಯಿಂದ ಗಾಯಿತ್ರಿ ಸರ್ಕಲ್ ಎಸ್.ಟಿ. ವಾಸುದೇವರೆಡ್ಡಿ (ಪೆಟ್ರೋಲ್ ಬಂಕ್) ವರೆಗೆ . |

| 1 | 2 | 3 |
|---|---|---|
| 28 | 28 | ಪೂರ್ವಕ್ಕೆ : ಬೆಂಗಳೂರು ರಸ್ತೆ ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂದಿನಿಂದ ಉತ್ತರಾಭಿಮುಖವಾಗಿ ಸಾಗುವ ದೊಡ್ಡ ಚರಂಡಿ ಅಕ್ಕಮಹಾದೇವಿ ಸಮಾಜದ ಕಟ್ಟಡದ ಮೂಲೆವರೆಗೆ ಹೋಗಿ ಪುನಃ ಸದರಿ ಚರಂಡಿ ಅಂಭಾಭವಾನಿ ದೇವಸ್ಥಾನ ಕಾಂಪೌಂಡ್ ಪಕ್ಕದಲ್ಲಿ ಹರಿದು ಹೋಗುವ ಚರಂಡಿಯನ್ನು ಪೂರ್ವದ ಸರಹದ್ದು ಆಗಿದ್ದು ಗಣೇಶನ ದೇವಸ್ಥಾನದ ಎಡಭಾಗಕ್ಕಿರುವ ಲಲಿತಮ್ಮನ ಮನೆವರೆಗೆ<br>ಪಶ್ಚಿಮಕ್ಕೆ : ಸರ್ಕಾರಿ ಆಸ್ಪತ್ರೆ ಮುಂಭಾಗದಲ್ಲಿರುವ ಸ್ವಾಮಿ ವಿವೇಕಾನಂದ ಪಾರ್ಕ್ ಮೂಲೆ ಸರ್ಕಲ್‌ನಿಂದ ಉತ್ತರಾಭಿಮುಖವಾಗಿ ನಗರಸಭೆ ಕಛೇರಿ ಮುಂಭಾಗದಿಂದ ನೇರವಾಗಿ ಸಾಗಿ ಬಿ.ಡಿ.ರಸ್ತೆ ಮಹಾವೀರ ಸರ್ಕಲ್ ಸುತ್ತಿಕೊಂಡು ಬಲಕ್ಕೆ ತಾಲ್ಲೂಕು ಕಟ್ಟಡ ಮುಂಭಾಗದಿಂದ ತಿರುಗಿ ಪುನಃ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಗಾಯಿತ್ರಿ ಸರ್ಕಲ್ ಮೂಲಕ ಫಾರೆಸ್ಟ್ ಮೂಲೆಗಿರುವ ವಿದ್ಯಾವರ್ಧಕ ಪಬ್ಲಿಕ್ ಸ್ಕೂಲ್ ಕಾಂಪೌಂಡ್‌ವರೆಗೆ<br>ಉತ್ತರಕ್ಕೆ : ಅರಣ್ಯ ಇಲಾಖೆ ಮುಂಭಾಗದ ವಿದ್ಯಾವರ್ಧಕ ಪಬ್ಲಿಕ್ ಸ್ಕೂಲ್ ಕಾಂಪೌಂಡ್ ಪೂರ್ವಾಭಿಮುಖವಾಗಿ ಸಾಗಿ ಐಶ್ವರ್ಯ ಹೊಟೇಲ್‌ವರೆಗೆ ಬಂದು ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಎಸ್.ಪಿ. ಆಫೀಸ್ ರಸ್ತೆ ಮೂಲಕ ಮುನ್ಸಿಪಲ್ ಕಾಲೋನಿ ಮುಖ್ಯರಸ್ತೆ ಮೂಲೆಯಲ್ಲಿರುವ ತಿಮ್ಮಾರೆಡ್ಡಿ ಮನೆಯಿಂದ ಪೂರ್ವಾಭಿಮುಖವಾಗಿ ಗಣೇಶ ದೇವಸ್ಥಾನ ಪಕ್ಕಕ್ಕಿರುವ ಲಲಿತಮ್ಮನವರ ಮನೆವರೆಗೆ<br>ದಕ್ಷಿಣಕ್ಕೆ : ಸ್ವಾಮಿ ವಿವೇಕಾನಂದ ಪಾರ್ಕ್ ಮೂಲೆಯಿಂದ ಪೂರ್ವಾಭಿಮುಖವಾಗಿ ಜಿಲ್ಲಾ ಆಸ್ಪತ್ರೆ ಮುಂಭಾಗದಿಂದ ಸಾಗಿ ಬೆಂಗಳೂರು ರಸ್ತೆ ಮೂಲಕ ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಮೂಲೆಗೆ ಕೊನೆಗೊಳ್ಳುತ್ತದೆ. |
| 29 | 29 | ಪೂರ್ವಕ್ಕೆ : ಮುನ್ಸಿಪಲ್ ಕಾಲೋನಿ ಭುವನೇಶ್ವರಿ ವೃತ್ತ ಮೂಲೆಯಲ್ಲಿರುವ ಪ್ರಹ್ಲಾದ ಗುಪ್ತ ರವರ ಮನೆಯಿಂದ ಉತ್ತರಾಭಿಮುಖವಾಗಿ ಸಾಗಿ ಕೆ.ಇ.ಬಿ. ಕೃಷ್ಣಪ್ಪ ಮನೆವರೆಗೆ ಸಾಗಿ ಬಲ ಭಾಗಕ್ಕೆ ತಿರುಗಿ ಪೂರ್ವಾಭಿಮುಖವಾಗಿ ದಿವಾಕರ್ ರವರ ಮನೆಯಿಂದ ಕೆ.ಎಸ್. ಚಂದ್ರಶೇಖರ್ ರವರ ಮೂಲೆ ಮನೆಯಿಂದ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಹೊಟೇಲ್ ನವೀನ್ ರೆಸಿಡೆನ್ಸಿಗೆ ಕೊನೆಗೊಳ್ಳುತ್ತದೆ.<br>ಪಶ್ಚಿಮಕ್ಕೆ : ಎಸ್.ಪಿ. ಆಫೀಸ್ ಮುಂಭಾಗದಲ್ಲಿರುವ ನಿವೃತ್ತ ಇಂಜಿನಿಯರ್ ಹಬೀಬ್ ರೆಹಮಾನ್ ಮನೆಯಿಂದ ಉತ್ತರಾಭಿಮುಖವಾಗಿ ತುರುವನೂರು ರಸ್ತೆಯ ಮೂಲಕ ಸಾಗಿ ಆರ್.ಟಿ.ಓ. ಆಫೀಸ್ ಮೂಲೆಗೆ ಕೊನೆಗೊಳ್ಳುತ್ತದೆ. ಜೊತೆಗೆ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ತುರುವನೂರು ರಸ್ತೆ ಎಡಭಾಗದಲ್ಲಿರುವ ಶ್ರೀ ವೆಂಕಟರಮಣ ಸ್ವಾಮಿ ಲೇಔಟ್ ಮನೆಗಳು ಸೇರುತ್ತವೆ<br>ಉತ್ತರಕ್ಕೆ : ಆರ್.ಟಿ.ಓ. ಆಫೀಸ್ ಮೂಲೆಯಿಂದ ಎನ್.ಹೆಚ್.–4 ಮೂಲಕ ಪೂರ್ವಾಭಿಮುಖವಾಗಿ ಸಾಗಿ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಬರುತ್ತಾ ಹೊಟೇಲ್ ನವೀನ್ ರೆಸಿಡೆನ್ಸಿ ಪಕ್ಕಕ್ಕೆ ಕೊನೆಗೊಳ್ಳುತ್ತದೆ.<br>ದಕ್ಷಿಣಕ್ಕೆ : ಎಸ್.ಪಿ. ಆಫೀಸ್ ಮುಂಭಾಗದಲ್ಲಿರುವ ನಿವೃತ್ತ ಇಂಜಿನಿಯರ್ ಅಬೀಬ್‌ರೆಹಮಾನ್ ಮನೆಯಿಂದ ಪೂರ್ವಾಭಿಮುಖವಾಗಿ ಮುನ್ಸಿಪಲ್ ರಸ್ತೆ ಮೂಲಕ ಸಾಗಿ ಭುವನೇಶ್ವರಿ ವೃತ್ತದಲ್ಲಿರುವ ಪ್ರಹ್ಲಾದ ಗುಪ್ತ ಇವರ ಮನೆಗೆ ಕೊನೆಗೊಳ್ಳುತ್ತದೆ. |
| 30 | 30 | ಪೂರ್ವಕ್ಕೆ : ಚನ್ನಕೇಶವ ದೇವಸ್ಥಾನದ ಮೂಲೆಯಿಂದ ಉತ್ತರಾಭಿಮುಖವಾಗಿ ಸಾಗಿ ಬಲಕ್ಕೆ ತಿರುಗಿ ನಿವೃತ್ತ ಪೊಲೀಸ್ ಕೆ.ಎಂ.ರುದ್ರಯ್ಯ ಇವರ ಮನೆಯಿಂದ ಪೂರ್ವಾಭಿಮುಖವಾಗಿ ಸಾಗಿ ಏಕಲವ್ಯ ವೃತ್ತದಲ್ಲಿರುವ ಉದ್ದನ್ನಯ್ಯ ರವರ ಮನೆಯವರೆಗೆ<br>ಪಶ್ಚಿಮಕ್ಕೆ : ಲಾ ಕಾಲೇಜ್ ಕಾಂಪ್ಲೆಕ್ಸ್ ಮೂಲೆಯಿಂದ ಉತ್ತರಾಭಿಮುಖವಾಗಿ ಹರಿದು ಹೋಗುವ ದೊಡ್ಡ ಚರಂಡಿ ಅಂಬಾಭವಾನಿ ದೇವಸ್ಥಾನ ಕಾಂಪೌಂಡ್ ಮೂಲಕ ಮುನ್ಸಿಪಲ್ ಕಾಲೋನಿ ಮುಖ್ಯರಸ್ತೆ ಗಣೇಶನ ದೇವಸ್ಥಾನಕ್ಕೆ ಕೊನೆಗೊಳ್ಳುತ್ತದೆ. ಪುನಃ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಸಾಗಿ ಭುವನೇಶ್ವರಿ ವೃತ್ತದಲ್ಲಿರುವ ನಿವೃತ್ತ ತಹಶೀಲ್ದಾರ್ ರಾಜಣ್ಣ ರವರ ಮನೆ ಮುಖೇನ ಉತ್ತರಾಭಿಮುಖವಾಗಿ ಸಾಗಿ ಎ.ಸಿ. ಆಫೀಸ್ ರುದ್ರಪ್ಪನ ಮನೆವರೆಗೆ ಕೊನೆಗೊಳ್ಳುತ್ತದೆ.<br>ಉತ್ತರಕ್ಕೆ : ಮುನ್ಸಿಪಲ್ ಕಾಲೋನಿ ಕೊನೆಯಲ್ಲಿರುವ ಶಾರದ ಶಿಶು ವಿಹಾರದಿಂದ ಪಶ್ಚಿಮಾಭಿಮುಖವಾಗಿ ಸಾಗಿ ಎ.ಸಿ.ಆಫೀಸ್ ರುದ್ರಪ್ಪನ ಮನೆಗೆ ಕೊನೆಗೊಂಡು ಎಡಕ್ಕೆ ತಿರುಗಿ ಸಹಾಯಕ ನಿರ್ದೇಶಕರಾದ ರಾಮಲಿಂಗಯ್ಯ ಇವರ ಮನೆಯಿಂದ ಪಶ್ಚಿಮಾಭಿಮುಖವಾಗಿ ಸಾಗಿ ಗಣೇಶನ ದೇವಸ್ಥಾನದ ವರೆಗೆ<br>ದಕ್ಷಿಣಕ್ಕೆ : ಆಕಾಶವಾಣಿ ರಸ್ತೆ ಮೂಲೆಯಲ್ಲಿರುವ ಮುನ್ಸಿಪಲ್ ಕಾಂಪ್ಲೆಕ್ಸ್ ಮೂಲೆಯಿಂದ ಪೂರ್ವಾಭಿಮುಖವಾಗಿ ಸಾಗಿ ಚನ್ನಕೇಶವನ ಹೊಂಡಕ್ಕೆ ಕೊನೆಗೊಂಡು ಎಡಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಸಾಗಿ ಏಕಲವ್ಯ ವೃತ್ತದಲ್ಲಿರುವ ಡಾ: ರಾಮಚಂದ್ರನಾಯ್ಕ ಮನೆವರೆಗೆ |
| 31 | 31 | ಪೂರ್ವಕ್ಕೆ : ಬೆಂಗಳೂರು ರಸ್ತೆ ಎಡಭಾಗಕ್ಕಿರುವ ಭೀಮಪ್ಪನಾಯಕನ ರಸ್ತೆ ಮೂಲೆಯಲ್ಲಿರುವ ಎಂ.ಎಸ್.ತಿಪ್ಪೇಸ್ವಾಮಿ ಬಿಲ್ಡಿಂಗ್‌ನಿಂದ ಉತ್ತರಾಭಿಮುಖವಾಗಿ ಸಾಗಿ ಲೇಡಿಸ್ ಹಾಸ್ಟೆಲ್ ದಕ್ಷಿಣದಲ್ಲಿರುವ ರಸ್ತೆ ಮೂಲಕ ಪೂರ್ವಾಭಿಮುಖವಾಗಿ ಕೊನೆವರೆಗೂ ಸಾಗಿ ಎಡಭಾಗಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸಾಗಿ ಓವರ್ ಹೆಡ್ ದೊಡ್ಡ ಟ್ಯಾಂಕ್‌ವರೆಗೆ<br>ಪಶ್ಚಿಮಕ್ಕೆ : ಬೆಂಗಳೂರು ರಸ್ತೆ ಕೆ.ಎಸ್.ಆರ್.ಟಿ.ಸಿ. ಡಿಪೋ ಹಿಂಭಾಗದಲ್ಲಿರುವ ವ್ಯವಸಾಯ ಸಹಕಾರ ಬ್ಯಾಂಕ್ ಪಕ್ಕದಿಂದ ಉತ್ತರಾಭಿಮುಖವಾಗಿ ಹರಿದು ಹೋಗುವ ದೊಡ್ಡ ಚರಂಡಿಯ ಮೂಲಕ ಸಾಗಿ ಲಾ ಕಾಲೇಜ್ ಕಾಂಪ್ಲೆಕ್ಸ್‌ವರೆಗೆ<br>ಉತ್ತರಕ್ಕೆ : ಲಾ ಕಾಲೇಜ್ ಕಾಂಪ್ಲೆಕ್ಸ್ ಮೂಲೆಯಿಂದ ಪೂರ್ವಾಭಿಮುಖವಾಗಿ ಸಾಗಿ ಸುನಿತ ನರ್ಸಿಂಗ್ ಹೋಂ, ಡಾ: ರಾಮಚಂದ್ರನಾಯ್ಕ ರವರ ಮನೆ ಮೂಲಕ ಹೌಸಿಂಗ್ ಬೋರ್ಡ್ (ಎಂ.ಐ.ಜಿ.) ಮೂಲೆಯಲ್ಲಿರುವ ನೀರಿನ ಓವರ್ ಹೆಡ್ ಟ್ಯಾಂಕ್‌ವರೆಗೆ<br>ದಕ್ಷಿಣಕ್ಕೆ : ಕೆ.ಎಸ್.ಆರ್.ಟಿ.ಸಿ. ಡಿಪೋ ಹಿಂಭಾಗದಲ್ಲಿರುವ ವ್ಯವಸಾಯ ಸಹಕಾರ ಬ್ಯಾಂಕ್‌ನಿಂದ ಪೂರ್ವಾಭಿಮುಖವಾಗಿ ಸಾಗಿ ಭೀಮಪ್ಪನಾಯಕ ರಸ್ತೆಯಲ್ಲಿರುವ ಎಂ.ಎಸ್.ತಿಪ್ಪೇಸ್ವಾಮಿ ಬಿಲ್ಡಿಂಗ್ ಮೂಲೆವರೆಗೆ (ಭೀಮಪ್ಪನಾಯಕನ ರಸ್ತೆ ಈ ವಾರ್ಡಿಗೆ ಸೇರುತ್ತದೆ. |

| 1 | 2 | 3 |
|---|---|---|
| 32 | 32 | ಪೂರ್ವಕ್ಕೆ : ಬನಶಂಕರಿ ಲೇಔಟ್ ಮೂಲೆಯಿಂದ ದಕ್ಷಿಣಾಭಿಮುಖವಾಗಿ ಸಾಗಿ ಮಾಗನೂರು ಪೆಟ್ರೋಲ್ ಬಂಕ್ ವರೆಗೆ<br>ಪಶ್ಚಿಮಕ್ಕೆ : ಭೀಮಪ್ಪನಾಯಕನ ರಸ್ತೆಯಲ್ಲಿರುವ ಒಕ್ಕಲಿಗರ ಹಾಸ್ಟೆಲ್ ಕಾಂಪೌಂಡ್‌ನಿಂದ ಪ್ರಾರಂಭಗೊಂಡು ಎಸ್.ಜೆ.ಎಂ.ಡೆಂಟಲ್ ಕಾಲೇಜ್ ಹಾಸ್ಟೆಲ್ ಕಾಂಪೌಂಡ್‌ಗೆ ಕೊನೆಗೊಂಡು ಪುನಃ ಏಕಲವ್ಯ ಸರ್ಕಲ್ ಮುಂಭಾಗದಲ್ಲಿರುವ ಅಂಗಡಿ ವಿಶ್ವನಾಥ್ ಮನೆಯಿಂದ ಪ್ರಾರಂಭವಾಗಿ ಉತ್ತರಾಭಿಮುಖವಾಗಿ ಸಾಗಿ ಡಾ: ಸುರೇಶ್‌ಬಾಬು ಮನೆವರೆಗೆ ಕೊನೆಗೊಳ್ಳುತ್ತದೆ<br>ಉತ್ತರಕ್ಕೆ : ಡಾ: ಸುರೇಶ್‌ಬಾಬು ಮನೆಯಿಂದ ರಾಷ್ಟ್ರೀಯ ಹೆದ್ದಾರಿ ದಾಟಿಕೊಂಡು ಹೌಸಿಂಗ್ ಬೋರ್ಡ್ ಮುಖೇನ ಬನಶಂಕರಿ ಲೇಔಟ್ ಅಂತ್ಯಕ್ಕೆ ಕೊನೆಗೊಳ್ಳುತ್ತದೆ.<br>ದಕ್ಷಿಣಕ್ಕೆ : ಮಾಗನೂರು ಪೆಟ್ರೋಲ್ ಬಂಕ್ ಮುಂದಿನಿಂದ ಚಳ್ಳಕೆರೆ ಸರ್ಕಲ್ ಸುತ್ತುವರಿದು ಪಂಚಾಚರ್ಯ ಕಲ್ಯಾಣ ಮಂಟಪ ಮುಖೇನ ಸಾಗಿ ಒಕ್ಕಲಿಗರ ಹಾಸ್ಟೆಲ್ ಮೂಲೆಗೆ ಕೊನೆಗೊಳ್ಳುತ್ತದೆ. (ಜೊತೆಗೆ ಚಳ್ಳಕೆರೆ ರಸ್ತೆಯಲ್ಲಿರುವ ವೆಂಕಟೇಶ್ವರ ಬಡಾವಣೆ ಈ ವಾರ್ಡಿಗೆ ಸೇರಿರುತ್ತದೆ. |
| 33 | 33 | ಪೂರ್ವಕ್ಕೆ : ಸ್ಟೇಡಿಯಂ ಮುಂಭಾಗದ ಜೈಭೀಮ್ ಸರ್ಕಲ್ ಮುಂಭಾಗದಲ್ಲಿರುವ ಅನುಗ್ರಹ ಕಾಂಪ್ಲೆಕ್ಸ್‌ನಿಂದ ಉತ್ತರಾಭಿಮುಖವಾಗಿ ಸಾಗಿ ಬೆಂಗಳೂರು ರಸ್ತೆ ಮೂಲೆಗಿರುವ ಕರ್ನಾಟಕ ಕೈಗಾರಿಕಾ ಇಲಾಖೆ ಕಟ್ಟಡದವರೆಗೆ<br>ಪಶ್ಚಿಮಕ್ಕೆ : ಜಿಲ್ಲಾ ಆಸ್ಪತ್ರೆ ಪಕ್ಕದಲ್ಲಿರುವ ಜೈಲ್ ಕಟ್ಟಡದಿಂದ ದಕ್ಷಿಣಾಭಿಮುಖವಾಗಿ ಜೋಗಿಮಟ್ಟಿ ಮುಖ್ಯರಸ್ತೆ ಮೂಲಕ ಸಾಗಿ ತಿಪ್ಪಿನಘಟ್ಟಮ್ಮ ದೇವಸ್ಥಾನದ ಮುಂಭಾಗದ ಮೂಲೆಯಲ್ಲಿರುವ ಲೆಕ್ಚರರ್ ಈ.ಕೌಂಟ್ಸ್ ಮನೆವರೆಗೆ<br>ಉತ್ತರಕ್ಕೆ : ಜೈಲ್ ಬಿಲ್ಡಿಂಗ್ ಮೂಲೆಯಿಂದ ಪೂರ್ವಾಭಿಮುಖವಾಗಿ ಜಿಲ್ಲಾ ಆಸ್ಪತ್ರೆ ಮುಖೇನ ಸಾಗಿ ಸ್ಟೇಡಿಯಂ ಡಬಲ್ ರಸ್ತೆ ಮೂಲೆಯಲ್ಲಿರುವ ಕೈಗಾರಿಕಾ ಇಲಾಖೆ ಕಟ್ಟಡಕ್ಕೆ ಕೊನೆಗೊಳ್ಳುತ್ತದೆ.<br>ದಕ್ಷಿಣಕ್ಕೆ : ಜೋಗಿಮಟ್ಟಿ ರಸ್ತೆಯಿಂದ ಲೆಕ್ಚರರ್ ಈ–ಕೌಂಟ್ಸ್ ಮನೆಯಿಂದ ಪೂರ್ವಾಭಿಮುಖವಾಗಿ ಸ್ಟೇಡಿಯಂ ಮುಂಭಾಗದ ಜೈಭೀಮ್ ಸರ್ಕಲ್‌ವರೆಗೆ |
| 34 | 34 | ಪೂರ್ವಕ್ಕೆ : ಪಂಚಾಚರ್ಯ ಕಲ್ಯಾಣ ಮಂಟಪ ಮುಂಭಾಗದ ಈಶ್ವರ ದೇವಸ್ಥಾನದಿಂದ ದಕ್ಷಿಣಾಭಿಮುಖವಾಗಿ ವಿಜ್ಞಾನ ಕಾಲೇಜ್ ಮತ್ತು ಕಲಾ ಕಾಲೇಜ್ ಮಧ್ಯದಲ್ಲಿರುವ ರಸ್ತೆ ಮುಖಾಂತರ ಸಾಗಿ ಜಿಲ್ಲಾ ಪರಿಷತ್ ಸಭಾಂಗಣ ಸುತ್ತುವರಿದು ಸ್ಟೇಡಿಯಂ ಸುತ್ತುವರಿದು ಮಹಿಳಾ ತರಬೇತಿ ಕೇಂದ್ರ ಹಿಂಭಾಗದಿಂದ ಸಿ.ಟಿ.ಕೃಷ್ಣಮೂರ್ತಿ ಇವರ ಲೇಔಟ್‌ಗೆ ಕೊನೆಗೊಳ್ಳುತ್ತದೆ.<br>ಪಶ್ಚಿಮಕ್ಕೆ : ಸ್ವಾಮಿ ವಿವೇಕಾನಂದ ನಗರ ಮುಂಭಾಗದಲ್ಲಿರುವ ನಾಗರಾಜಪ್ಪ ಲೇಔಟ್ (ಕೆ.ಎಸ್.ಆರ್.ಟಿ.ಸಿ. ನೌಕರ) ನಿಂದ ಉತ್ತರಾಭಿಮುಖವಾಗಿ ಜೋಗಿಮಟ್ಟಿ ರಸ್ತೆಯ ಮೂಲಕ ಬಂದು ತಿಪ್ಪಿನಘಟ್ಟಮ್ಮ ದೇವಸ್ಥಾನ ಸುತ್ತಿ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಸಾಗಿ ಶಶಿಕಾಂತ್ (ಸಿದ್ದೇಶ್ವರ ನಿಲಯ) ನಿಂತು ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸ್ಟೇಢಿಯಂ ರಸ್ತೆ ಮೂಲಕ ಬೆಂಗಳೂರು ರಸ್ತೆಗೆ ನಿಲ್ಲುತ್ತದೆ.<br>ಉತ್ತರಕ್ಕೆ : ತಿಪ್ಪಿನಘಟ್ಟಮ್ಮ ದೇವಸ್ಥಾನದ ಮೂಲೆಯಿಂದ ಜೈಭೀಮ್ ಸರ್ಕಲ್ ಮುಂದೆ ಇರುವ ಶಶಿಕಾಂತ್ ಮನೆವರೆಗೆ ಮತ್ತು ಸ್ಟೇಡಿಯಂ ರಸ್ತೆ ಮೂಲೆಗಿರುವ ಸರ್ಕಾರಿ ಜೂನಿಯರ್ ಕಾಲೇಜ್‌ನಿಂದ ಪೂರ್ವಾಭಿಮುಖವಾಗಿ ಬೆಂಗಳೂರು ರಸ್ತೆ ಮೂಲಕ ಪಂಚಾಚಾರ್ಯ ಕಲ್ಯಾಣ ಮಂಟಪ ಹಿಂಭಾಗದಲ್ಲಿರುವ ಈಶ್ವರ ದೇವಸ್ಥಾನದ ವರೆಗೆ<br>ದಕ್ಷಿಣಕ್ಕೆ : ಜೋಗಿಮಟ್ಟಿ ರಸ್ತೆ ಸ್ವಾಮಿ ವಿವೇಕಾನಂದ ನಗರ ಮುಂಭಾಗದಲ್ಲಿರುವ ನಾಗರಾಜಪ್ಪ ಲೇಔಟ್ ಮತ್ತು ಸಿ.ಟಿ.ಕೃಷ್ಣಮೂರ್ತಿ ಲೇಔಟ್ ಪಕ್ಕಕ್ಕಿರುವ ಪೂರ್ಣ ಗುಡ್ಡದ ಪ್ರದೇಶ |
| 35 | 35 | ಪೂರ್ವಕ್ಕೆ : ಚಳ್ಳಕೆರೆ ರಸ್ತೆಯಲ್ಲಿರುವ ವಿನಾಯಕ ಕಲ್ಯಾಣ ಮಂಟಪದಿಂದ ದಕ್ಷಿಣಾಭಿಮುಖವಾಗಿ ಸಾಗಿ ಹಳೇ ಬೆಂಗಳೂರು ರಸ್ತೆ ದಾಟಿಕೊಂಡು ಬಲಭಾಗಕ್ಕೆ ಬರುವ ಹೊಸ ಜೈಲು ಕಟ್ಟಡ, ಕೈಗಾರಿಕಾ ಪ್ರದೇಶ ಸುತ್ತುವರಿದು ರಾಷ್ಟ್ರೀಯ ಹೆದ್ದಾರಿ ದಾಟಿ ಗಾಂಧೀನಗರ ಸರ್ವೆ ನಂ: 39/3 ರ ಎಲ್ಲಾ ಆಶ್ರಯ ಮನೆಗಳು ಒಳಗೊಂಡು ಗುಡ್ಡಕ್ಕೆ ಅಂತ್ಯಗೊಳ್ಳುತ್ತದೆ.<br>ಪಶ್ಚಿಮಕ್ಕೆ : ಪಂಚಾಚರ್ಯ ಕಲ್ಯಾಣ ಮಂಟಪ ಮುಂಭಾಗದಿಂದ ವಿಜ್ಞಾನ ಕಾಲೇಜ್ ಮತ್ತು ಕಲಾ ಕಾಲೇಜ್ ಮಧ್ಯಭಾಗದಿಂದ ದಕ್ಷಿಣಾಭಿಮುಖವಾಗಿ ಹಾದು ಹೋಗುವ ರಸ್ತೆ ಮೂಲಕ ಸಾಗಿ ಗುಡ್ಡದ ಪ್ರದೇಶಕ್ಕೆ ಅಂತ್ಯಗೊಳ್ಳುತ್ತದೆ.<br>ಉತ್ತರಕ್ಕೆ : ಪಂಚಾಚರ್ಯ ಕಲ್ಯಾಣ ಮಂಟಪದ ಮುಂಭಾಗದಲ್ಲಿರುವ ಕಲಾ ಕಾಲೇಜ್ ಕಾಂಪೌಂಡ್ ಮೂಲೆಯಿಂದ ಪೂರ್ವಾಭಿಮುಖವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಚಳ್ಳಕೆರೆ ವೃತ್ತ ಸುತ್ತುವರಿದು ಚಳ್ಳಕೆರೆ ರಸ್ತೆಯಲ್ಲಿರುವ ವಿನಾಯಕ ಕಲ್ಯಾಣ ಮಂಟಪದ ವರೆಗೆ<br>ದಕ್ಷಿಣಕ್ಕೆ : ರಿ.ಸರ್ವೆ ನಂ: 66/109, 89/10–11, 39/3 ಮತ್ತು ಪಶ್ಚಿಮಕ್ಕೆ ಬರುವ ಗುಡ್ಡದ ಪ್ರದೇಶ |

(ಕೆ. ಅಮರನಾರಾಯಣ)
ಜಿಲ್ಲಾಧಿಕಾರಿಗಳು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ